ಮೈಸೂರ ಗಿಜಿಪ.

ಸಂ. XXXI.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 24, ಸ್ರ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಮುಡ್ಯು ಕೇರ್ಷ ಇನ್‌ಸ್ಪೆಕ್ಟರ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆರ್ಷ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟೆ ಜಡ್ಜೀರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕ್ವಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್ಸುಗಳು ವ ರೆಗ್ಯುಲೇರ್ಷಗಳು. ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 1ನೇ ಸೆಪ್ಟಂಬರ್ 1896.

ನಂ. 3122.—ಜು. 316, ಮೈಸೂರ್ ಗವರ್ಮೆಂಟಿನವರು ಸಕಲ ಜನರ ತಿಳುವಳಿಕೆ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ,—1896ನೇ ಸೆಪ್ಟಂಬರ್ 15ನೇ ತಾರೀಖಿನ ಲಾಗಾಯತು ವ ಆ ತರುವಾಯು "ಶಿವಮೊಗ್ಗಾ ಸಬಾರ್ಡಿನೇಟೆ ಜಡ್ಜರ ಕೋರ್ಟು" ಎಂಬದಾಗಿ ಕರಿಯಲ್ಪಡತಕ್ಕ ಒಂದು ಸಬಾರ್ಡಿನೇಟೆ ಜಡ್ಜರ ಕೋರ್ಟು ಶಿವಮೊಗ್ಗೆಯಲ್ಲಿ ಸ್ಥಾಪಿಸಲ್ಪಡುವದು, ಮತ್ತು ಸದರೀ ಕೋರ್ಟಿಗಾಗಿ ಮೊಕರರ್ಮಾಡಲ್ಪಟ್ಟ ಸಬಾರ್ಡಿನೇಟೆ ಜಡ್ಜರು 1883ನೇ ಇಸವಿಯ ಮೈಸೂರ್ ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 9ನೇ ಸೆಕ್ಷರ್ಷ ಅನುಸರಿಸಿ, ಬಬ್ಬ ಸಬಾರ್ಡಿನೇಟೆ ಜಡ್ಜರ ಅಧಿಕಾರವನ್ನ ಶಿವಮೊಗ್ಗಾ, ಕಡೂರು ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳ ಸ್ಥಳ ಸರಹದ್ದುಗಳಲ್ಲ ಚಲಾಯಿಸತಕ್ಕದ್ದು.

ತಾರೀಖು 10ನೇ ಸೆಪ್ಟಂಬರ್ 1896.

ನಂ. 3516.—ಜು. 362, ಮೈಸೂರ್ ಸರ್ವಿಸ್ ರೆಗ್ಯುಲೇರ್ಷಗಳ 172ನೇ ಆರ್ಟಿಕಲ್ ಅನುಸರಿಸಿ, ಕೋಲಾರ್ ಗೋಲ್ಡ್ ಫೀಲ್ಡ್ಸ್ ಸ್ಪೆಷಲ್ ಮಾಜಿಸ್ಟ್ರೇಟ್ ವ ಮ್ಯುನಿಸಿಪಲ್ ಮೆಸ್ಟರ್ ಜಿ. ಹ್ಯೂಂಬೈಟೆಯವರಿಗೆ, 1896ನೇ ಸೆಪ್ಟಂಬರ್ 14ನೇ ಮರ್ಕುಂ ಲಾಗಾಯತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

3249

ತಾರೀಖು 8ನೇ ಸೆಪ್ಟಂಬರ್ 1896.

ನಂ. 3401.—ಲೋ. ಫಂ. 257—92, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ನಿಯಮಗಳನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಡವ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಚಿತ್ರದುರ್ಗ ಮ್ಯುನಿಸಿಪಾಲಿಟಿಯಲ್ಲಿ ಅಯ್ಯಣ್ಣನ ಪೇಟೆಯಿಂದ ಪುರುಷೋತ್ತಮ ಸಂತನಕೆರೆಗೆ ಒಂದು ರಸ್ತೆಯನ್ನು ಹಾಕುವ ಬಗ್ಗ್ಯಾಗಿ ಬೇಕಾಗಿರುತವೆ: —

ನಂಬರು.	ಮಾಲೀಕರ ಹೆಸರು.	ಜಮೀನು ಮತ್ತು ಮನೆಯ ತಪ್ಪೀಲು.	ತೆಗೆದುಕೊಳ್ಳಬೇಕಾದ ವಿಸ್ತೀರ್ಣ.			ಚಕ್ಕುಬಂದಿ.			
			ಪೂರ್ಣ ಸಂಖ್ಯೆ.	ಪರಿಮಾಣ. ದಶಮಾಂಶ.	ಚಿಲ್ಲರೆ ಸೀ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಗಜಗಳು.						
1	ಕಟ್ಟೆ ಮಹಾಲಿಂಗಪ್ಪ	ಸಾಧಾರಣ ಹೆಂಚಿನ ಮನೆ	3	8	24	ಕಲ್ಲಿಕೃಷ್ಣಪ್ಪನ ಬೈಲು ಅಂಗಳಗಳ	ಮಾಲೀಕರ ಮನೆಯ ಮಿಕ್ಕ ಭಾಗ	ಅಯ್ಯಣ್ಣನ ಪೇಟೆ	ಮಾಲೀಕರ ಬೈಲು ಅಂಗಳ
2	ಡಿಟೋ	ಬೈಲು ಅಂಗಳ	3	41	123.	ಡಿಟೋ	ಮಾಲೀಕರ ಮುಖ್ಯ ಕಟ್ಟಡ ಮತ್ತು ಭಾವಿ	ಮಾಲೀಕರ ಮೇಲ್ಕಂಡ ಹೆಂಚಿನ ಮನೆ	ವಕೀಲ್ ಶ್ರೀನಿವಾಸರಾಯರ ಹಿತ್ತಲು

ತಾರೀಖು 9ನೇ ಸೆಪ್ಟಂಬರ್ 1896.

ಈ ಕೆಳಗೆ ಕಂಡ ಬಡ್ತಿಯು ಹುಕುಂ ಮಾಡಲ್ಪಟ್ಟಿರುತ್ತೆ:—

ನಂ. 3490.—ಜು. 354, 1ನೇ ಕ್ಲಾಸ್ ಮುನಸಿಫ್ ವ ಅಸ್ಟಿಂಗ್ ಸಬ್ ಜಡ್ಜ್ ಮಸ್ಕರ್ ಎಸ್. ವೆಂಕಟವರದಯ್ಯಂಗಾರ್ಯರವರು, 1896ನೇ ಸೆಪ್ಟಂಬರ್ 15ನೇ ಮುಕ್ಕಂ ಲಾಗಾಯ್ತು ಸಬ್ ಪ್ರೋಟವಾಗಿ 2ನೇ ಕ್ಲಾಸ್ ಸಬ್ ಜಡ್ಜ್‌ರಾಗತಕ್ಕದ್ದು.

ನಂ. 3452.—ಲೋ. ಫಂ. 65—96, ಸ್ಯ 1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೇ ಸೆಕ್ಷನ್ ಅನುಸರಿಸಿ, ಪ್ರಸಿದ್ಧಪಡಿಸುವದೇನಂದರೆ,—ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ್ ಕೆಲಸಕ್ಕೆ ಆಂದರೆ, ಸಕ್ಕೇಶಪುರದ ಪಟ್ಟಣ ಬಡಾಯಿಸುವ ಬಗ್ಗ್ಯಾಗಿ ಬೇಕಾಗಿರುತವ:—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರರ ಹೆಸರು.	ತೆಗೆದುಕೊಳ್ಳಬೇಕಾದ ಜಮೀನಿನ ತಪ್ಪೀಲು.				ಚಕ್ಕುಬಂದಿ.			
				ಸರ್ವೇ ನಂ.	ತಪ್ಪೀಲು.	ವಿಸ್ತೀರ್ಣ.	ಬೇರೀಜು.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
						ಎ. ಗುಂ.	ರೂ. ಆ. ಪೈ				
ಹಾಸನ.	ಸಕ್ಕರೆಪಟ್ಟಣ.	ಸಕ್ಕರೆಪಟ್ಟಣ.	ಚನ್ನಬಿಕ ಸಣಿಗ	105	ಖುಷ್ಕೆ	3—10	1—4—0	ಸರ್ವೇ ನಂಬರ್ 107	ರಸ್ತೆ	ಸರ್ವೇ ನಂ. 103 ಮತ್ತು 104	ಸರ್ವೇ ನಂ. 106
			ಹುಚ್ಚಬೈರಬಿ ಈರ	ಸರ್ವೇ ನಂ. 107ರಲ್ಲಿ	ಡಿಟೋ	0—29	0—4—0	ಸರ್ವೇ ನಂಬರ್ 110 ಮತ್ತು 111	ಸರ್ವೇ ನಂ. 105 ಮತ್ತು 106	ಸರ್ವೇ ನಂ. 108 ಮತ್ತು 39	ಸರ್ವೇ ನಂ. 111
			ಜೋಯಿಸ ಕೃಷ್ಣಭಟ್ಟ, ಹುಚ್ಚಬೈರಬಿ ಈರ	ಡಿಟೋ	ಡಿಟೋ	0—30	0—4—0	..	..	..	..
			ನಿಂಗಾಬಿ ಮರಿನಿಂಗ	ಡಿಟೋ	ಡಿಟೋ	0—30	0—4—0	..	..	..	..
			ಚನ್ನಾಬಿ ಸಣಿಗ	ಡಿಟೋ	ಡಿಟೋ	3—16	0—4—0	..	..	..	..
						5—25	2—0—0				
			ಪಡವಲ್ ಬಿ ಅಯ್ಯಾಸಾಮಿ	113	ಡಿಟೋ	0—29	0—4—0	ಸರ್ವೇನಂ. 112 ಗಾ|| ನಿವೇಶನ	ಸರ್ವೇ ನಂ. 111	ಸರ್ವೇ ನಂ. 111	ಸರ್ವೇ ನಂ. 115

ತಾರೀಖು 23ನೇ ಸಪ್ಟಂಬರ್ 1896ನೇ ಇಸವಿ.

ನಂ. 4084.—ಮಿ. 837.—ಸ್ಯ 1894ನೇ ಇಸವಿ ಜೂನ್ 10ನೇ ಮಕ್ಕುಂ 21572.—ಜಿ. ಎಫ್. 99.—93ನೇ ನಂಬರಿನ ಇಸ್ತಿಹಾರಿನಾ ಏರ್ಪಡಿಸಿ ಸಾದರ್ಪಡಿಸಲ್ಪಟ್ಟ ನಿಯಮಗಳನುಸರಿಸಿ, ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ, ಯಿದರಡಿ ಕಂಡ ತಖ್ತೆಯು, ಸರ್ವರ ತಿಳುವಳಿಕೆ ಬ್ಯೆ ಘಾಯಿಷ್ ಮಾಡಲ್ಪಟ್ಟಿರುತ್ತೆ:—

1896ನೇ ಇಸವಿಯ ದಸರಾ ಪ್ರಜಾ ಪ್ರತಿನಿಧಿಗಳ ಸಭೆಗೆ ಚುನಾಯಿಸಲ್ಪಟ್ಟ ಮೆಂಬರುಗಳ ತಖ್ತೆ.

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಮೈಸೂರು ಡಿಸ್ಟ್ರಿಕ್ಟು.	
ಮೈಸೂರ್ ಟವ್ನ್ ಮ್ಯುನಿಸಿಪಾಲಿಟಿ	1 ಮೆಸ್ಟರ್ ಲಕ್ಷ್ಮೀನರಸಿಹ್ಮ ಅಯ್ಯಂಗಾರ್ರು	ಅಡ್ವೋಕೇಟ್
	2 ಡಿಟೋ ಎಂ. ವೆಂಕಟಕೃಷ್ಣಯ್ಯನವರು	ಸ್ಕೂಲ್ ಮಾಸ್ಟರ್
	3 ಡಿಟೋ ಎ. ರಾಮುಂಣನವರು	ಅಡ್ವೋಕೇಟ್
	4 ಡಿಟೋ ಹೆಚ್. ಕೃಷ್ಣರಾಯರು	ಡಿಟೋ
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಮೋರ್ಡು	1 ಡಿಟೋ ಅಂಬಳೆ ಅಣ್ಣಯ್ಯ ಪಂಡಿತರು	ಜಮೀರ್ದಾರ್
	2 ಡಿಟೋ ಶಿವೇಜಿರಾಯರು	ಡಿಟೋ
ಫ್ರೆಂಚ್‌ರಾಕ್ಸ್ ಲೋಕಲ್ ಫಂಡ್‌ಬೋರ್ಡು	1 ಡಿಟೋ ಅಕ್ಕಿಹೆಬ್ಬಾಳ್ ಕೃಷ್ಣಪ್ಪನವರು	ಡಿಟೋ
	2 ಡಿಟೋ ವೈದ್ಯನಾಥಪುರದ ರಾಮುಂಣನವರು	ಡಿಟೋ
ಮೈಸೂರ್ ತಾಲ್ಲೂಕು	1 ಡಿಟೋ ಕೃಷ್ಣರಾಯರು	ಕಂಟ್ರಾಕ್ಟರ್
	2 ಡಿಟೋ ಗೋಪಶೆಟ್ಟರು	ವರ್ತಕರು
	3 ಡಿಟೋ ಮಲ್ಲಿಕಾರ್ಜುನಪ್ಪನವರು	ಇನಾಂದಾರ್
	4 ಡಿಟೋ ಮಾದಪ್ಪನವರು	ಡಿಟೋ
ಯಸ್ಕೂರೆ ತಾಲ್ಲೂಕು	1 ಡಿಟೋ ಮಲ್ಲಿಕಾರ್ಜುನಯ್ಯನವರು	ಪಟೇಲ್
	2 ಡಿಟೋ ವೆಂಡರ್ ಸುಬ್ಬರಾಯರು	ಜಮೀರ್ದಾರ್
	3 ಡಿಟೋ ಅಂಣಾಜಯ್ಯಂಗಾರ್ರು	ಡಿಟೋ
	4 ಡಿಟೋ ದಾಸಶೆಟ್ಟರು	ವರ್ತಕರು
ಹುಣಸೂರು ತಾಲ್ಲೂಕು	1 ಡಿಟೋ ಚನ್ನಕೇಶವಯ್ಯ ವುರಫ್ ರಾಯಪ್ಪನವರು	ಜಮೀರ್ದಾರ್
	2 ಡಿಟೋ ಜ. ಕೃಷ್ಣಪ್ಪನವರು	ಪೆರ್ಷ ಸ್ಕೂಲ್ ಮಾಸ್ಟರ್
	3 ಡಿಟೋ ಪಟ್ರ ಡೇ ಸಾಹೆಬರು	ಗಂಧದೆಯಂಣೆ ಕಾರ್ಖಾನೆ ಸ್ವಂತ ಕರ್ತರು
ಡಿಟೋ ಮ್ಯುನಿಸಿಪಾಲಿಟಿ	1 ಡಿಟೋ ನರಸಿಹ್ಮಯ್ಯನವರು	ಜಮೀರ್ದಾರ್
ಹೆಗ್ಗಡದೇವನಕೋಟೆ ತಾಲ್ಲೂಕು	1 ಡಿಟೋ ರಂಗಯ್ಯಂಗಾರ್ರು	ಜಮೀರ್ದಾರ್ ಮತ್ತು ಕಂಟ್ರಾಕ್ಟರ್
	2 ಡಿಟೋ ಸುಬ್ಬಂಣನವರು	ಜಮೀರ್ದಾರ್ ಮತ್ತು ಶಾನಭೋಗ್
ಗುಂಡಲ್‌ಪೇಟೆ ತಾಲ್ಲೂಕು	1 ಡಿಟೋ ವಳಹಟ್ಟ ದೇವಪ್ಪನವರು	ಜಮೀರ್ದಾರ್
	2 ಡಿಟೋ ಗುರಿಕಾರ್ ಹೊನ್ನಪ್ಪನವರು	ಡಿಟೋ
ಚಾಮರಾಜನಗರ ತಾಲ್ಲೂಕು	1 ಡಿಟೋ ನಾಗಪ್ಪನವರು	ವರ್ತಕರು
	2 ಡಿಟೋ ಅಂಬಳೆ ಅಣ್ಣಯ್ಯ ಪಂಡಿತರು	ಜಮೀರ್ದಾರ್
	3 ಡಿಟೋ ವಾಸುದೇವಯ್ಯದವರು	ಡಿಟೋ ವ ಶಾನಭೋಗ್
ನಂಜನಗೂಡು ತಾಲ್ಲೂಕು	1 ಡಿಟೋ ಕಲಿಯೂರು ವೆಂಕಟಸುಬ್ಬಯ್ಯನವರು	ಪ್ಲೀಡರು
	2 ಡಿಟೋ ಮಸ್ತ್ರ್ ಸಾಹೆಬರು	ಜವಳಿ ವರ್ತರು
	3 ಡಿಟೋ ನಾಯಿಕ್ ನರಸಿಹ್ಮಾಚಾರ್ರು	ಬ್ಯಾಂಕ್ ಏಜಂಟ್
ಡಿಟೋ ಮ್ಯುನಿಸಿಪಾಲಿಟಿ	1 ಡಿಟೋ ಶಂಕರನಾರಣಪ್ಪನವರು	ಜಮೀರ್ದಾರ್
ತಿರುಮಕೂಡ್ಲು ನರಸೀಪುರ ತಾಲ್ಲೂಕು	1 ಡಿಟೋ ಶಿದ್ದಲಿಂಗವಂದೇವರು	ಬ್ಯಾಂಕ್ ಏಜಂಟ್
	2 ಡಿಟೋ ಕೂಳ್ಳೇಗಾಲ ವೆಂಕಟಾದ್ರಿಶಟ್ಟು	ಜಮೀರ್ದಾರ್
	3 ಖಾಲಿ	
ಶ್ರೀರಂಗಪಟ್ಣ ತಾಲ್ಲೂಕು	1 ಮೆಸ್ಟರ್ ನರಸಿಹ್ಮಗವುಡರು	ಜಮೀರ್ದಾರ್
	2 ಖಾಲಿ	
	3 ಡಿಟೋ	
	4 ಮೆಸ್ಟರ್ ವೆಂಕಟಕೃಷ್ಣಪ್ಪನವರು	ಜಮೀರ್ದಾರ್ ಮತ್ತು ಶಾನಭೋಗ್
ಡಿಟೋ ಮ್ಯುನಿಸಿಪಾಲಿಟಿ	1 ಡಿಟೋ ಕರಿಮೊಹರ್ದಿ ಸಾಹೆಬರು	ಸ್ಕೂಲ್ ಮಾಸ್ಟರ್
ಕೃಷ್ಣರಾಜಪೇಟೆ ತಾಲ್ಲೂಕು	1 ಡಿಟೋ ರಂಗಯ್ಯಂಗಾರ್ರು	ಜಮೀರ್ದಾರ್ ವ ಪೆರ್ಷನರ್
	2 ಡಿಟೋ ಶೀತಾರಾಮಯ್ಯನವರು	ಡಿಟೋ ಮತ್ತು ಶಾನಭೋಗ್
	3 ಡಿಟೋ ಲಿಂಗರಾಜಗವುಡರು	ಜಮೀರ್ದಾರ್ ವ ಪಟೇಲ್

351

ಚುನಾಯಿಸಿದವರು.	ಚುಯಿಸಲ್ಪಟ್ಟವರ ಹೆಸರು.	ಕಸಬು.
ನಾಗಮಂಗಲ್ ತಾಲ್ಲೂಕು	1 ಮೆಸ್ಸರ್ ಚಂದ್ರಶೇಕರಯ್ಯನವರು ..	ಜಮೀರ್ದಾರ್
	2 ಡಿಟೋ ಗುಂಡಪ್ಪನವರು ..	ಜಮೀರ್ದಾರ್ ಮತ್ತು ಶಾನಭೋಗ್
	3 ಡಿಟೋ ದೊಡ್ಡೇಗವುಡರು ..	ಜಮೀರ್ದಾರ್ ಮತ್ತು ಪಟೇಲ್
ಮಂಡ್ಯ ತಾಲ್ಲೂಕು	1 ಡಿಟೋ ಜೆನ್ನಪ್ಪನ ನಂಜಪ್ಪನವರು ..	ವರ್ತಕರು
	2 ಡಿಟೋ ರಾಮಂಣನವರು ..	ಜಮೀರ್ದಾರ್
	3 ಡಿಟೋ ಎ. ಆನಂದಾಳ್ವಾರ್ರು ..	ಡಿಟೋ
ಮಳವಳ್ಳಿ ತಾಲ್ಲೂಕು	1 ಡಿಟೋ ಶಂಕರಪ್ಪನವರು ..	ಡಿಟೋ
	2 ಡಿಟೋ ಮಾಯಿಗವುಡರು ..	ಡಿಟೋ
ಡಿಟೋ ಮ್ಯುನಿಸಿಪಾಲಿಟಿ ..	1 ಖಾಲಿ	
ಶ್ರೀಯದುಗಿರಿಸದಾನಂದವರ್ಧನೀಸಭಾ ..	1 ಮೆಸ್ಸರ್ ತಿರುವಾಯಿವೊಳಿ ತಿರುನಾರಣಯ್ಯಂಗಾರು) ..	ಆಚಾರ್ಯರು
	ಬೆಂಗಳೂರು ಡಿಸ್ಟ್ರಿಕ್ಟು.	
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ ..	1 ಮೆಸ್ಸರ್ ಡಿ. ವೆಂಕಟ್ರಾಮಯ್ಯನವರು ..	ಅಡ್ವೊಕೇಟ್
	2 ಡಿಟೋ ನಾಗಪ್ಪನವರು ..	ವರ್ತಕರು
	3 ಡಿಟೋ ಎಂ. ರುದ್ರಪ್ಪನವರು ..	ಸ್ಲವರಿಸ್ಟ್
	4 ಡಿಟೋ ಹಾಫಿಜುಲ್ಲಾಖಾ ಸಾಹೆಬರು ..	ಹಕೀಂ
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು ..	1 ಡಿಟೋ ಗುರಿಕಾರ ತಿಮ್ಮಪ್ಪನವರು ..	ಜಮೀರ್ದಾರ್
	2 ಡಿಟೋ ಶ್ರೀಕಂಠಯ್ಯನವರು ..	ಡಿಟೋ
ಬೆಂಗಳೂರು ತಾಲ್ಲೂಕು ..	1 ಡಿಟೋ ರೆವರೆಂಡ್ ಸಿ. ಡಬ್ಲ್ಯು. ಕ್ರಿಸ್ಟಿಯರ್ಯಯವರು ...	ಮಿಷನೆರಿ ಮತ್ತು ಜಮೀರ್ದಾರ್
	2 ಡಿಟೋ ಚಿತಂಬರಸಾಹುಜಿಯವರು ..	ವರ್ತಕರು
	3 ಡಿಟೋ ವೇಲುಮೊದಲಿಯಾರು) ..	ಜಮೀರ್ದಾರ್
ಹೊಸಕೋಟೆ ತಾಲ್ಲೂಕು ..	1 ಡಿಟೋ ಪ್ಯಾರೇಗವುಡರ ಮುನೇಗವುಡರು ..	ಡಿಟೋ
	2 ಖಾಲಿ	
	3 ಮೆಸ್ಸರ್ ಮಗವಳ ಭಾಸ್ಕರಯ್ಯನವರು .	ಜಮೀರ್ದಾರ್ ಮತ್ತು ಪಟೇಲ್
ಚನ್ನಪಟ್ಟಣ ಕುಲೀಸ್‌ಪ್ಯಾಟೆ ನ॥ ತಾ॥ ಸೇರಿ.	1 ಡಿಟೋ ಭೂಭೂಮಿಯಪ್ಪಾ ಸಾಹೆಬ್ ಭಜಂತ್ರಿ.	ಜಮೀರ್ದಾರ್
	2 ಡಿಟೋ ಯಜಮಾ ನರಸಿಕ್ಕಯ್ಯನವರು.	ವರ್ತಕರು ಮತ್ತು ಜಮೀರ್ದಾರ್
	3 ಡಿಟೋ ನಂಜುಂಡಗವುಡರು ..	ಪಟೇಲ್ ಮತ್ತು ಜಮೀರ್ದಾರ್
ಚನ್ನಪಟ್ಟಣ ಮ್ಯುನಿಸಿಪಾಲಿಟಿ .	1 ಡಿಟೋ ರಾಮಶಟ್ಟರು ..	ವರ್ತಕರು
ಕುಲೀಸ್‌ಪ್ಯಾಟೆ ಡಿಟೋ .	1 ಡಿಟೋ ಅಹಮದುಲ್ಲಾಖಾನರು ..	ಡಿಟೋ
ಆನೇಕಲ್ ತಾಲ್ಲೂಕು .	1 ಡಿಟೋ ರಾಮಸ್ವಾಮಯ್ಯಂಗಾರು) .	ಪಾಳ್ಳೇಗಾರ) ವಕೀಲರು .
	2 ಡಿಟೋ ಹುಸ್ತೂರು ದಾಸಪ್ಪಯ್ಯಂಗಾರು),	ಶಾನಭೋಗ್
	3 ಡಿಟೋ ಎಂ. ಧಾಳಪ್ಪನವರು ..	ಡಿಟೋ
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಜೆ. ರಂಗಯ್ಯನವರು ..	ಉಪದೇಶಿಕರು
ಕಾರ್ಕಾರಹಳ್ಳಿ ತಾಲ್ಲೂಕು .	1 ಡಿಟೋ ಗುರಿಕಾರ್ ತಿಮ್ಮೇಗವುಡರು ..	ಜಮೀರ್ದಾರ್ ಮತ್ತು ಪಟೇಲ್
	2 ಡಿಟೋ ಶ್ರೀನಿವಾಸರಾಯರು ..	ಜಮೀರ್ದಾರ್ ಮತ್ತು ಪೆನ್ಷನರ್
	3 ಡಿಟೋ ಕೂನೂರು ರಾಮೇ ಅರಸಿನವರು ..	ಡಿಟೋ ಮತ್ತು ಪಟೇಲ್
ನೆಲಮಂಗಲ್ ತಾಲ್ಲೂಕು ..	1 ಡಿಟೋ ಬೇಗೂರು ವೀರಭದ್ರಯ್ಯನವರು ..	ವರ್ತಕರು ಮತ್ತು ಜಮೀರ್ದಾರ್
	2 ಡಿಟೋ ರಾಜದೊಡ್ಡನಂಜಯ್ಯನವರು ..	ವರ್ತಕರು
	3 ಡಿಟೋ ದೇಶಕುಲಕರಣಿ ದಾಸಪ್ಪನವರು ..	ಜೋಡಿದಾರ್
ದೇವನಹಳ್ಳಿ ತಾಲ್ಲೂಕು ..	1 ಡಿಟೋ ಬಾಲೇಪುರದ ವೆಂಕಟ್ರಾಮಯ್ಯನವರು ..	ಶಾನಭೋಗ್ ಮತ್ತು ಜಮೀರ್ದಾರ್
	2 ಡಿಟೋ ಆರಳೇ ಮುದ್ದಣ್ಣನವರು ..	ವರ್ತಕರು ಮತ್ತು ಜಮೀರ್ದಾರ್
	3 ಡಿಟೋ ಅರದೇಶಹಳ್ಳಿ ರಾಮಚಂದ್ರಯ್ಯನವರು	ಜೋಡಿದಾರ್
ಡಿಟೋ ಮ್ಯುನಿಸಿಪಾಲಿಟಿ .	1 ಡಿಟೋ ಶ್ರೀನಿವಾಸ ಗೋಪಾಲ ಚಾರ್)	ಜಮೀರ್ದಾರ್
ದೊಡ್ಡಬಳಾಪುರ ತಾಲ್ಲೂಕು ..	1 ಡಿಟೋ ಕರಿ ರಿಯಪ್ಪನವರು ..	ಶಾನಭೋಗ್ ಮತ್ತು ಜಮೀರ್ದಾರ್
	2 ಡಿಟೋ ಶ್ರೀನಿವಾಸಮೂರ್ತಿಗಳು .	ಜಮೀರ್ದಾರ್
	3 ಡಿಟೋ ರುಮಾಲೆ ರುದ್ರಪ್ಪನವರು.	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಸದಾಶಿವರಾಯರು	ಪ್ಲೀಡರ್ ಮತ್ತು ಜಮೀರ್ದಾರ್
ಮಾಗಡಿ ತಾಲ್ಲೂಕು ..	1 ಡಿಟೋ ಎಂ. ಕೆ. ಕ್ರಿಷ್ಣಮೂರ್ತಿರಾಯರು.	ಜಮೀರ್ದಾರ್
	2 ಡಿಟೋ ವೆಂಕಟರಾಮ ಶಟ್ಟರು ..	ವರ್ತಕರು
	3 ಡಿಟೋ ಪುಟ್ಟಣ್ಣ ಶಟ್ಟರು ..	ಡಿಟೋ

352

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಕೋಲಾರದ ಡಿಸ್ಟ್ರಿಕ್ಟ್.	
ಕೋಲಾರ ತಾಲ್ಲೂಕು ..	1 ಮೆಸ್ಟರ್ ಸಾಹುಕಾರ್ ಕೇಷಯ್ಯಂಗಾರು ..	ಶಾನಭೋಗ್
	2 ಡಿಟೋ ಬಸವೇಗವ್ವಡರು ..	ಪಟೇಲ್
	3 ಡಿಟೋ ಪೊನ್ನ ಸುಬ್ಬಣ್ಣನವರು ..	ಜಮ್ಮಿದಾರ್
	4 ಡಿಟೋ ಶ್ಯೆರೇಗವ್ವಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ	1 ಡಿಟೋ ಲಟ್ಟವೆಂಕಟಮುನಿಯಪ್ಪನವರು ..	ವರ್ತಕರು
	2 ಡಿಟೋ ಗುರುರಾಯರು ..	ಪ್ಲೀಡರ್
	3 ಡಿಟೋ ಮೂಲೂರು ಮಲ್ಲಪ್ಪಶಟ್ಟರು ..	ವರ್ತಕರು
ಡಿಸ್ಟ್ರಿಕ್ಟ್ ಲೋಕಲ್ ಫಂಡುಬೋರ್ಡ್ ..	1 ಡಿಟೋ ಜವಳಿಸುಬ್ಬಶಾಸ್ತ್ರಿಗಳು ..	ಜೋಡಿದಾರು
	2 ಡಿಟೋ ಕಲ್ಲಹಳ್ಳಿ ರಾಮೇಗವ್ವಡರು ..	ಪಟೇಲ್
ಬವರಿಂಗ್ ಪ್ಯಾಟೆ ತಾಲ್ಲೂಕು ..	1 ಡಿಟೋ ವರದಾಪುರ ಚಂಗರಡ್ಡಿಯವರು ..	ಪಟೇಲ್ ಮತ್ತು ಜಮ್ಮಿದಾರ್
	2 ಡಿಟೋ ತಿರುನಾರಾಯಣಸ್ವಾಮಿ ಮೊದಲಿಯಾರು ..	ಕಂಟ್ರಾಕ್ಟರ್
	3 ಡಿಟೋ ಸುಬ್ಬಣ್ಣನವರು ..	ಶಾನಭೋಗ್
ಮುಳಬಾಗಲ್ ತಾಲ್ಲೂಕು ..	1 ಡಿಟೋ ಭೀಮರಾಯರು ..	ಡಿಟೋ
	2 ಡಿಟೋ ನಾರಪ್ಪನವರು ..	ಜಮ್ಮಿದಾರ್
	3 ಡಿಟೋ ವೆಂಕಟೇಗವ್ವಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ತೊಟ್ಲ ಪಳ್ಳಿ ಮುನಿಯಪ್ಪನವರು.	ಜಮ್ಮಿದಾರ್
ಚಿಂತಾಮಣಿ ತಾಲ್ಲೂಕು ..	1 ಡಿಟೋ ಚಿನ್ನಪ್ಪನವರು ..	ಶಾನಭೋಗ್ ಮತ್ತು ಜಮ್ಮಿದಾರ್
	2 ಡಿಟೋ ಮುನಿಕಾಮಿಗವ್ವಡರು ..	ಪಟೇಲ್ ಮತ್ತು ಜಮ್ಮಿದಾರ್
ಶ್ರೀನಿವಾಸಪುರ ಸಬ್ ತಾಲ್ಲೂಕು ..	1 ಡಿಟೋ ಸದಾಶಿವಪ್ಪನವರು ..	ಶಾನಭೋಗ್
	2 ಡಿಟೋ ಶ್ರೀಕಂಠಪ್ಪನವರು ..	ಪಟೇಲ್
ಚಿಕ್ಕಬಳ್ಳಾಪುರ ತಾಲ್ಲೂಕು ..	1 ಡಿಟೋ ನರಸಿಹ್ಮಡ್ಡಿಯವರು ..	ಡಿಟೋ
	2 ಡಿಟೋ ಯರನಾಳ್ ನರಸಿಹ್ಮಯ್ಯನವರು ..	ವರ್ತಕರು
	3 ಡಿಟೋ ರಂಗಸಾಮಯ್ಯಂಗಾರು ..	ಪ್ಲೀಡರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಸಾಹುಕಾರ್ದೊಡ್ಡವನಿಯಪ್ಪನವರು ..	ವರ್ತಕರು
ಗೋರೀಬಿದನೂರು ತಾಲ್ಲೂಕು ..	1 ಖಾಲಿ ..	
	2 ಮೆಸ್ಟರ್ ಚಿಕ್ಕ ಸುಬ್ಬರಾಯಪ್ಪನವರು ..	ಶಾನಭೋಗ್
	3 ಡಿಟೋ ನಾರಾಯಣಗಡವ್ವರು ..	ಪಟೇಲ್
ಬಾಗೇಪಲ್ಲಿ ತಾಲ್ಲೂಕು ..	1 ಡಿಟೋ ಸುಬ್ಬಪ್ಪನವರು ..	ಶಾನಭೋಗ್ ಮತ್ತು ಜಮ್ಮಿದಾ
	2 ಡಿಟೋ ವೆಂಕಟನರಸಪ್ಪನವರು ..	ಜಮ್ಮಿದಾರ್
ಗುಡಿಬಂಡೆ ಸಬ್ ತಾಲ್ಲೂಕು ..	1 ಡಿಟೋ ಬಚಿನ ಕರಿಯಪ್ಪನವರು ..	ಜಮ್ಮಿದಾರ್ ಮತ್ತು ವರ್ತಕರು
ಶಿಡ್ಲಘಟ್ಟ ತಾಲ್ಲೂಕು ..	1 ಡಿಟೋ ಗುಡಿಬಂಡೆ ಲಕ್ಷ್ಮಣರಾಯರು ..	ಶಾನಭೋಗ್
	2 ಡಿಟೋ ಮುತ್ತೂರು ವೆಂಕಟರಮಣಯ್ಯನವರು ..	ಡಿಟೋ
	3 ಡಿಟೋ ಹುನುವೇಗವ್ವಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ರಾಮೇಗವ್ವಡರು ..	ಜಮ್ಮಿದಾರ್ ಮತ್ತು ಪಟೇಲ್
ಮೂಲೂರು ತಾಲ್ಲೂಕು ..	1 ಡಿಟೋ ಸೀತಾರಾಮಯ್ಯನವರು ..	ಶಾನುಭೋಗ್
	2 ಡಿಟೋ ವೆಂಕುರಮಣಯ್ಯನವರು ..	ಡಿಟೋ
ಕೋಲಾರ ಗೋಲ್ಡ್‌ಫೀಲ್ಡ್ಸ್ ಮೈನಿಂಗ್ ಬೋರ್ಡ್ ...	1 ಡಿಟೋ ಕ್ಯಾಪ್ಟ್ ಜೋಸ್‌ರೋಸಾಹೇಬರು	ಯುರಿಗಂ ಛಾಂಪಿಯರ್ಸ್‌ರೀಫ್‌ಕಂಪೆನಿ ಸೂಪರಿಟೆಂಡೆಂಟರು
	ತುಮಕೂರು ಡಿಸ್ಟ್ರಿಕ್ಟ್.	
ತುಮಕೂರು ತಾಲ್ಲೂಕು ..	1 ಡಿಟೋ ಕೇಷಭಟ್ಟರರಾಮಣ್ಣನವರು	ಜಮ್ಮಿದಾರ್
	2 ಡಿಟೋ ಅಪ್ಪಣ್ಣಶಟ್ಟರ ಕೆಂಜಪ್ಪನವರು ..	ವರ್ತಕರು
	3 ಡಿಟೋ ಸಸಲು ತಿಮ್ಮೇಗವ್ವಡರು ..	ಜೆರಾಯಿತ್‌ದಾರ್
	4 ಡಿಟೋ ಹೊನ್ನುಡಿಕಿಪುಟ್ಟಶಾಮಯ್ಯನವರು	ಜಮ್ಮಿದಾರ್
ಡಿಟೋ ಮ್ಯುನಿಸಿಪಾಲಿಟಿ ...	1 ಡಿಟೋ ವೆಂಕಟಾಚಾರ್ರು ..	ಪ್ಲೀಡರ್
	2 ಡಿಟೋ ಸಿ. ತಿರುವೆಂಗಡತೊಡಲಿಯಾರು ..	ಪರ್ಪರ ಅಮಲೆದಾರು
	3 ಡಿಟೋ ಸಯ್ಯದ್‌ದಾವೂದಸಾಹೇಬರು ..	ಪರ್ಪರ ಬಾರ್‌ಸುಜೇದಾರು
ಡಿಸ್ಟ್ರಿಕ್ಟ್ ಲೋಕಲ್ ಫಂಡ್ ಬೋರ್ಡ್ ..	1 ಡಿಟೋ ರಾಮದಾಸಪ್ಪನವರು ..	ಜಮ್ಮಿದಾರ್ ಮತ್ತು ಪ್ಲೀಡರ್
	2 ಡಿಟೋ ಆಗಳಿಕೃಷ್ಣಪ್ಪನವರು ..	ಜಮ್ಮಿದಾರ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಮದ್ದಗಿರಿ ತಾಲ್ಲೂಕು ..	1 ಮೆಸ್ಸರ್ ನಾಗಪ್ಪನವರು ಬಿ ಗೋಪಾಲಯ್ಯನವರು ..	ಜಮೀರ್ದಾರ್
	2 ಡಿಟೋ ಮೈದರಹಳ್ಳಿ ಶಾಮಣ್ಣನವರು ..	ಡಿಟೋ
	3 ಡಿಟೋ ಶ್ರವಂಡರಹಳ್ಳಿ ಚಿಕ್ಕೇಗವುಡರು ..	ಪಟೇಲ್ ಮತ್ತು ಜೀರಾಯಿತಿದಾರ್
ಕೊರಟಗೆರೆ ಸಬ್ ತಾಲ್ಲೂಕು ..	1 ಡಿಟೋ ಬಸಪ್ಪ ..	ಜೀರಾಯಿತಿದಾರ್
ಚಿಕ್ಕನಾಯಕನಹಳ್ಳಿ ತಾಲ್ಲೂಕು ..	1 ಡಿಟೋ ಪುಟ್ಟಣ್ಣನವರು ...	ಶಾನಭೋಗ್
	2 ಡಿಟೋ ನರಸಿಹ್ಮಯ್ಯನವರು ..	ಡಿಟೋ
ಹುಳಿಯಾರ್ ಸಬ್ ತಾಲ್ಲೂಕು ..	1 ಡಿಟೋ ಗಫೂರ್‌ಖಾನ್‌ಸಾಹೇಬರು ..	ಜಮೀರ್ದಾರ್
ಚಿರಾ ತಾಲ್ಲೂಕು ..	1 ಡಿಟೋ ಕುಂಜಗೇನಹಳ್ಳಿಬಡೇಸಾಹೇಬರು	ಜೀರಾಯಿತ್‌ದಾರ್
	2 ಡಿಟೋ ಪಟ್ಟಣಯಕನಹಳ್ಳಿ ಕಂಕರಚೌಡಪ್ಪನವರು ..	ಡಿಟೋ ಮತ್ತು ವರ್ತಕರು
	3 ಡಿಟೋ ಯಲದಬಾಗೇ ಲಕ್ಷ್ಮೀನರಸೇಗವುಡರು ..	ಜೀರಾಯಿತಿದಾರ್
ಗುಬ್ಬೀ ತಾಲ್ಲೂಕು ..	1 ಡಿಟೋ ಕಡಬದ ರಾಮಾನುಜಯ್ಯಂಗಾರು ..	ಜಮೀರ್ದಾರ್
	2 ಡಿಟೋ ಗುಬ್ಬೀ ಮದಾರ್‌ಸಾಹೇಬರು ..	ಜೀರಾಯಿತಿದಾರ್ ಮತ್ತು ಕಂಟ್ರಾಕ್ಟರ್
	3 ಡಿಟೋ ಕಲವಟ್ಟ ಹೊನ್ನಲಿಂಗೇಗವುಡರು	ಜಮೀರ್ದಾರ್ ಮತ್ತು ಪಟೇಲ್
	4 ಡಿಟೋ ಕಡಬದ ನಂಜುಂಡೆಭಟ್ಟರು ..	ಜಮೀರ್ದಾರ್
ತಿಪಟೂರು ತಾಲ್ಲೂಕು ..	1 ಡಿಟೋ ರಂಗಾಪುರದ ಬಸವಲಿಂಗಯ್ಯನವರು	ಜೀರಾಯಿತಿದಾರ್
	2 ಡಿಟೋ ನೊಣವಿನಕೆರೆ ಸುಬ್ಬರಾಯರು ..	ಶಾನಭೋಗ್ ಮತ್ತು ಜಮೀರ್ದಾರ್
ತುರುವೇಕೆರೆ ಸಬ್ ತಾಲ್ಲೂಕು ..	1 ಡಿಟೋ ನಾಗಪ್ಪನವರು	ಪಟೇಲ್
ಪಾವಗಡ ತಾಲ್ಲೂಕು ..	1 ಡಿಟೋ ತಿರುಮಲತಾತಾಚಾರ್ಯರು ..	ಜಮೀರ್ದಾರ್
	2 ಡಿಟೋ ಪುಟ್ಟನಂಜರಡ್ಡಿಯವರು ..	ಪಟೇಲ್
ಕುಣಿಗಲ್ ತಾಲ್ಲೂಕು ..	1 ಡಿಟೋ ಹಿರೂರು ಗುಂಡಪ್ಪನವರು ..	ಜಮೀರ್ದಾರ್
	2 ಡಿಟೋ ರಂಗೇಗವುಡರು ..	ಪಟೇಲ್
	3 ಡಿಟೋ ಅಮೃತೂರು ಕೃಷ್ಣಯ್ಯಂಗಾರು ..	ಜಮೀರ್ದಾರ್
	ಹಾಸನ ಡಿಸ್ಟ್ರಿಕ್ಟ್.	
ಆಲೂರು ಸಬ್ ತಾಲ್ಲೂಕು ದೇವಿಲ್ ಹಾಸನ ತಾಲ್ಲೂಕು ..	1 ಡಿಟೋ ಸುಬ್ಬಶಟ್ಟರು ..	ವರ್ತಕರು
	2 ಡಿಟೋ ಸಯ್ಯದ್‌ಖಾದರ್‌ಸಾಹೇಬರು ..	ಡಿಟೋ
	3 ಡಿಟೋ ಕೆ. ವೀನಿವಾಸಮೂರ್ತಿಯವರು ...	ಜಮೀರ್ದಾರ್
	4 ಡಿಟೋ ನಾರಣಯ್ಯಂಗಾರು ..	ಜಮೀರ್ದಾರ್ ಮತ್ತು ಶಾನಭೋಗ್
ಹಾಸನ ಮ್ಯುನಿಸಿಪಾಲಿಟಿ ..	1 ಡಿಟೋ ನಾಡಿಗ ಚೆನ್ನಕೇಶವಯ್ಯನವರು ..	ಬ್ಯಾಂಕ್ ಏಜಂಟ್
	2 ಡಿಟೋ ಪಸಾರೆಧರಣಪ್ಪನವರು ..	ವರ್ತಕರು
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡ್ ..	1 ಡಿಟೋ ಕಲಸಾಪುರದ ತಮ್ಮಯ್ಯನವರು ...	ಕಾಫಿ ಪ್ಲ್ಯಾಂಟರ್
	2 ಡಿಟೋ ಬಾಣಾವಾರದ ವೆಂಕಟಸುಬ್ಬಯ್ಯನವರು ..	ಇನಾಂದಾರ್
ಮಂಜರಾಬಾದ ತಾಲ್ಲೂಕು ..	1 ಡಿಟೋ ವೆಂಕಟಾಚಲಶಟ್ಟರು ...	ವರ್ತಕರು
	2 ಡಿಟೋ ನರಸಿಹ್ಮಯ್ಯನವರು ...	ಶಾನಭೋಗ್
	3 ಡಿಟೋ ಮಲ್ಲೇಗವುಡರು ...	ಪೊಟ್ಟೆಸರ್ ಪಟೇಲ್
	4 ಖಾಲಿ ...	
ಬೇಲೂರು ತಾಲ್ಲೂಕು ..	1 ಮೆಸ್ಸರ್ ಲಕ್ಕುಂದದ ಕೇಶವಯ್ಯಂಗಾರು ..	ಶಾನಭೋಗ್
	2 ಡಿಟೋ ಅಬ್ದುಲ್‌ರಹಿಮ್‌ಖಾನ್‌ಸಾಹೇಬರು ..	ಕಾಫಿ ಪ್ಲ್ಯಾಂಟರ್
	3 ಖಾಲಿ ..	
ಅರಸೀಕೆರೆ ತಾಲ್ಲೂಕು ..	1 ಮೆಸ್ಸರ್ ಶ್ರೀನಿವಾಸಯ್ಯನವರು ..	ಜಮೀರ್ದಾರ್ ಮತ್ತು ಶಾನಭೋಗ್
	2 ಡಿಟೋ ಕೆಂಚರಾಯಶಟ್ಟರು ..	ವರ್ತಕರು
	3 ಡಿಟೋ ದಾಸಪ್ಪನವರು ..	ಜಮೀರ್ದಾರ್ ಮತ್ತು ಶಾನಭೋಗ್
ಚನ್ನರಾಯಪಟ್ಟಣ ತಾಲ್ಲೂಕು ..	1 ಡಿಟೋ ವೆಂಕಟರಾಮಯ್ಯನವರು ..	ಶಾನಭೋಗ್
	2 ಡಿಟೋ ಕೆಂಪೇಗವುಡರು ..	ಜಮೀರ್ದಾರ್ ಮತ್ತು ಪಟೇಲ್
	3 ಡಿಟೋ ಕೃಷ್ಣಪ್ಪನವರು ..	ಜಮೀರ್ದಾರ್ ಮತ್ತು ಶಾನಭೋಗ್
ಹೊಳೇನರಸೀಪುರದ ತಾಲ್ಲೂಕು ..	1 ಡಿಟೋ ವೆಂಕಟರಾಮಯ್ಯನವರು ..	ಜಮೀರ್ದಾರ್ ಮತ್ತು ಫ್ಲೀಡರ್
	2 ಡಿಟೋ ಕೃಷ್ಣರಾಮಣಪಂಡಿತರು ..	ಜಮೀರ್ದಾರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಕೆ. ರಾಘವೇಂದ್ರಾಚಾರ್ ..	ಸಾಹುಕಾರ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಅರಕಲ್‌ಗೂಡು ತಾಲ್ಲೂಕು ..	1 ಮೆಸ್ಸರ್ ಪುಟ್ಟಸ್ವಾಮಯ್ಯನವರು ..	ಶಾನಭೋಗ್
	2 ಡಿಟೋ ಅಬ್ದುಲ್ಲಾ ಸಾಹೇಬರವರು ...	ಜಮೀರ್ದಾರ್
	3 ಡಿಟೋ ಮಲ್ಲಪ್ಪಾಜಿ ಅರಸಿನವರು ..	ಪಟೇಲ್
ಸಾತ್ ಮೈಸೂರ್ ಯೂರೋಪಿಯರ್ಸ್ .. ಪ್ಲಾಂಟರ್ಸ್ ಅಸೋಸಿಯೇಷನ್ ..	1 ಡಿಟೋ ಜೇ. ಜಿ. ಹ್ಯಾಮಿಲ್ಟನ್ ಸಾಹೇಬರು	ಕಾಫಿ ಪ್ಲಾಂಟರ್
ಸಾತ್ ಮೈಸೂರು ನೇಟಿವ್ ಪ್ಲಾಂಟರ್ಸ್ .. ಅಸೋಸಿಯೇಷನ್ ..	1 ಡಿಟೋ ಉಡೇವರದ ದ್ಯಾವಪ್ಪ ಗೌಡರು ...	ಡಿಟೋ
	ಶಿವಮೊಗ್ಗಾ ಡಿಸ್ಟ್ರಿಕ್ಟು.	
ಶಿವಮೊಗ್ಗಾ ತಾಲ್ಲೂಕು ..	1 ಮೆಸ್ಸರ್ ಹೊಸದುರ್ಗದ ಗಿರಿಯಪ್ಪನವರು	ಜಮೀರ್ದಾರ್
	2 ಡಿಟೋ ಗೌಸ್‌ಷರೀಫ್ ಸಾಹೆಬರು ..	ಸಾಹುಕಾರ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಎಚ್. ಗಿರಿಯಪ್ಪನವರು ..	ಜಮೀರ್ದಾರ್
	2 ಡಿಟೋ ಚನ್ನಗಿರಿ ಮಲ್ಲಾರಿರಾಯರು ..	ಪ್ಲೀಡರ್
	3 ಡಿಟೋ ಜಿ. ಕೋಡಪ್ಪನವರು ..	ವರ್ತಕರು
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು ..	1 ಡಿಟೋ ನಾಡಿಗ ತಿಮ್ಮಪ್ಪನವರು ...	ಜಮೀರ್ದಾರ್
	2 ಡಿಟೋ ಹೊಸಬಾಳೆ ತಿಮ್ಮಪ್ಪನವರು ...	ಡಿಟೋ
ಕುಂಚಿ ಸಬ್ ತಾಲ್ಲೂಕು ..	1 ಡಿಟೋ ರಾಮಚಂದ್ರಪ್ಪನವರು ಬಿ ಹಿರ ಲಾಲಪ್ಪನವರು ..	ಡಿಟೋ
	2 ಡಿಟೋ ನರಸಿಂಹ ವೆಂಕಪ್ಪನಾಯಕರು ...	ಡಿಟೋ
ಚನ್ನಗಿರಿ ತಾಲ್ಲೂಕು ..	1 ಡಿಟೋ ಸಂತೆಬೆನ್ನೂರ ಸಾಹಿಮಲ್ಲಯ್ಯನವರು	ವರ್ತಕರು
	2 ಡಿಟೋ ಮುರಳಿಸಿದ್ದಯ್ಯನವರು ಬಿ ರೇವ ಯ್ಯನವರು ..	ಜಮೀರ್ದಾರ್
	3 ಡಿಟೋ ಕತ್ತಲಗಿರಿ ಮುದಿಗಪ್ಪಗವುಡರು ..	ಪಟೇಲ್ ಮತ್ತು ಜಮೀರ್ದಾರ್
	4 ಡಿಟೋ ಬಳಿಗನೂಡಿ ಗೌಡಲಿಂಗಯ್ಯನವರು	ಡಿಟೋ
ಹೊನ್ನಾಳಿ ತಾಲ್ಲೂಕು ...	1 ಡಿಟೋ ಚಟ್ನಹಳ್ಳಿನಾಡಿಗಗೋಪಾಲಪ್ಪನವರು	ಶಾನಭೋಗ್ ಮತ್ತು ಜಮೀರ್ದಾರ್
	2 ಡಿಟೋ ಮಲ್ಲೂರು ನಾಡಿಗನರಸಿಂಗಪ್ಪನವರು	ಡಿಟೋ ಡಿಟೋ
	3 ಡಿಟೋ ಬೆಳಗುತ್ತಿನಾಡಿಗ ಮಲ್ಲಾರಪ್ಪನವರು	ಡಿಟೋ ಡಿಟೋ
	4 ಡಿಟೋ ಮುನಿಯಪ್ಪನ ಗುರುಬಸಪ್ಪನವರು	ಜಮೀರ್ದಾರ್ ಮತ್ತು ವರ್ತಕರು
ಶಿಕಾರಿಪುರ ತಾಲ್ಲೂಕು ..	1 ಡಿಟೋ ದೇವಪ್ಪನವರು ಬಿ ರಂಗಭಟ್ಟರು	ಪಟೇಲ್ ಮತ್ತು ಜಮೀರ್ದಾರ್
	2 ಡಿಟೋ ರಂಗಪ್ಪನವರು ಬಿ ಹುಚ್ಚರಾಯರು	ಜಮೀರ್ದಾರ್ ಮತ್ತು ಶಾನಭೋಗ್
	3 ಡಿಟೋ ರಮಣೀ ಬಸಪ್ಪನವರು ..	ವರ್ತಕರು
	4 ಡಿಟೋ ಆಂಟೆಕೊಪ್ಪದ ಬಸಪ್ಪನವರು ...	ಡಿಟೋ
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಎಸ್. ರಾಮರಾಯರು ...	ಜಮೀರ್ದಾರ್
ಸೊರಬ ತಾಲ್ಲೂಕು .	1 ಡಿಟೋ ಹೆಗ್ಗಡೆ ರಾವಪ್ಪನವರು ಬಿ ಪುಟ್ಟಪ್ಪನವರು ...	ಪಟೇಲ್ ಮತ್ತು ಜಮೀರ್ದಾರ್
	2 ಡಿಟೋ ಈರೇಹಳ್ಳಿ ನಾಡಿಗ ಶಿವಪ್ಪನವರು ಬಿ ವಿರೂಪಾಕ್ಷಪ್ಪನವರು ..	ಶಾನಭೋಗ್ ಮತ್ತು ಜಮೀರ್ದಾರ್
	3 ಡಿಟೋ ಕ್ಯಾಸರಗುಪ್ಪೆ ಶಿವಯ್ಯನವರು ಬಿ ಭಂಡಯ್ಯನವರು ..	ಪಟೇಲ್ ಮತ್ತು ಜಮೀರ್ದಾರ್
	4 ಡಿಟೋ ಹ್ಯಾವಗೋಡ್ ಶಿವಯ್ಯನವರು ಬಿ ಕೊಟ್ಟುರಯ್ಯನವರು	ಡಿಟೋ ಡಿಟೋ
ಸಾಗರ ತಾಲ್ಲೂಕು ..	1 ಡಿಟೋ ಬಿಳಿ ಕೃಷ್ಣಪ್ಪನವರು ಬಿ ದ್ಯಾವ ಪ್ಪನವರು ..	ಜಮೀರ್ದಾರ್
	2 ಡಿಟೋ ಕಾಗೋಡು ಗುರುವಯ್ಯಗವುಡರು ಬಿ ಗುರುವಯ್ಯನವರು ..	ಡಿಟೋ
	3 ಖಾಲಿ.	
	4 ಮೆಸ್ಸರ್ ಕೇಲಡಿ ಮಹಾಂತಪ್ಪನವರು ಉರಫ್ ಫಕೀರಯ್ಯನವರು ...	ಹಿರೇಮಠದ ಯೇಜಂಟ್
ನಗರ ತಾಲ್ಲೂಕು ..	1 ಡಿಟೋ ಹೆಬ್ಬಯಲು ಲಿಂಗಪ್ಪನವರು ..	ಶಾನಭೋಗ್ ಮತ್ತು ಜಮೀರ್ದಾರ್
	2 ಡಿಟೋ ಮಂಜೇಗೌಡರು ..	ಜಮೀರ್ದಾರ್ ಮತ್ತು ವರ್ತಕರು
	3 ಡಿಟೋ ಚಂದ್ರಯ್ಯನ ನಾಗಪ್ಪನವರು ..	ಡಿಟೋ ಡಿಟೋ
	4 ಡಿಟೋ ನಾಗೇಂದ್ರಭಟ್ಟರು	ವರ್ತಕರು
ತೀರ್ಥಹಳ್ಳಿ ತಾಲ್ಲೂಕು ..	1 ಡಿಟೋ ಕುಲುಂದ ತಿಮ್ಮಣ್ಣಗವುಡರು ..	ಜಮೀರ್ದಾರ್
	2 ಡಿಟೋ ಹಂದಲಸಿನ ಸುಬ್ಬಣ್ಣನವರು .	ಜಮೀರ್ದಾರ್ ಮತ್ತು ಕಂಟ್ರಾಕ್ಟರ್
	3 ಡಿಟೋ ಅಡಿವಪ್ಪನವರು ಬಿ ಕೊಟ್ರಪ್ಪನ ವರು ..	ಸಾಹುಕಾರ್
	4 ಡಿಟೋ ಜವಳಿ ವಿಠಲಯ್ಯನವರು ...	ವರ್ತಕರು
ನಗರ ಸಭಾ ..	1 ಡಿಟೋ ಎಸ್. ಆನಂದರಾಯರು, ಬಿ. ಏ., ಬಿ. ಎಲ್. ..	ಅಡ್ವೊಕೇಟ್

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
	ಹಡೂರು ಡಿಸ್ಟ್ರಿಕ್ಟು.	
ಚಿಕ್ಕಮಗಳೂರು ತಾಲ್ಲೂಕು ..	1 ಮೆಸ್ಸರ್ ಸಿ. ಶ್ರೀನಿವಾಸರಾಯರು ..	ಕಾಫಿ ಪ್ಲಾಂಟರ್
	2 ಡಿಟೋ ಸಿ. ವಾಸುದೇವರಾಯರು ...	ಡಿಟೋ
	3 ಡಿಟೋ ವಿರತ್ತೇಗವ್ವಡರು ..	ಪಟೇಲ್ ಮತ್ತು ಡಿಟೋ
	4 ಡಿಟೋ ಪುಟ್ಟಣ್ಣಶೆಟ್ಟರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಬಿ. ಗುಂಡಪ್ಪನವರು ..	ಪ್ಲೀಡರ್
	2 ಡಿಟೋ ಗಂಜಾಂಅಬ್ದುಲ್‌ಖಾದರ್ ಸಾಹೆಬರು	ಕಾಫಿ ಪ್ಲಾಂಟರ್
ಡಿಸ್ಟ್ರಿಕ್ಟ್ ಲೋಕಲ್‌ಫಂಡ್ ಬೋರ್ಡ್ ..	1 ಡಿಟೋ ಗುಂಡಪ್ಪನವರು ...	ಪ್ಲೀಡರ್ ಮತ್ತು ಇನಾಂದಾರ್
	2 ಡಿಟೋ ಕುಪ್ಪುಸ್ವಾಮಿಪಿಳ್ಳೈಯವರು ..	ಕಾಫಿ ಪ್ಲಾಂಟರ್
ತರೀಕೆರೆ ತಾಲ್ಲೂಕು ..	1 ಡಿಟೋ ಅತ್ತಿಗನಾಳ ಶಾಮಂಣನವರು ..	ಡಿಟೋ
	2 ಡಿಟೋ ಕುಪ್ಪುಸ್ವಾಮಿಪಿಳ್ಳೈಯವರು ..	ಡಿಟೋ
	3 ಡಿಟೋ ಹಿರೆಕತೂರ್ ನರಸಪ್ಪನವರು ..	ಶಾನಭೋಗ್
	4 ಡಿಟೋ ಬೀರನಹಳ್ಳಿ ಬಸವೇಗವ್ವಡರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಗೊಟ್ಟೂರು ವೆಂಕಟಸುಬ್ಬಯ್ಯನವರು ..	ವರ್ತಕರು
ಕೊಪ್ಪದ ತಾಲ್ಲೂಕು ..	1 ಡಿಟೋ ಕಿಗ್ಗದ ವಿಶ್ವೇಶ್ವರಯ್ಯನವರು ..	ಜಮೀನ್ದಾರ್
	2 ಡಿಟೋ ಹೆಡಸೆ ಸೀತಾರಾಮಶಾಸ್ತ್ರಿಗಳು ...	ಡಿಟೋ
	3 ಡಿಟೋ ಹರಿಹರಪುರದ ರಂಗಣ್ಣ ಉಪಾಧ್ಯರು	ಜಮೀನ್ದಾರ್ ಮತ್ತು ಸಾಹುಕಾರ್
ಎಡೆಹಳ್ಳಿ ಸಬ್ ತಾಲ್ಲೂಕು ..	1 ಡಿಟೋ ತರೀಕೆರೆ ಶ್ರೀನಿವಾಸರಾಯರು ..	ಜಮೀನ್ದಾರ್
ಕಡೂರು ತಾಲ್ಲೂಕು ..	1 ಡಿಟೋ ಪತ್ತೇ ರುದ್ರಪ್ಪನವರು ..	ಸಾಹುಕಾರ್
	2 ಡಿಟೋ ಪಟ್ಟಗೆರೆ ರಂಗಂಣನವರು ...	ಜಮೀನ್ದಾರ್
	3 ಡಿಟೋ ಅನವಟ್ಟಿ ರಂಗರಾಯರು ..	ಡಿಟೋ
ಮೂಡಗೆರೆ ತಾಲ್ಲೂಕು ..	1 ಡಿಟೋ ಹೊರನಾಡ್ ಪುಟ್ಟಣ್ಣಶೆಟ್ಟರು ..	ಪಟೇಲ್
	2 ಡಿಟೋ ಶಾಂತರಾಜಯ್ಯ ಹೆಗ್ಗಡೆಯವರು ..	ಜಮೀನ್ದಾರ್
	3 ಡಿಟೋ ಕೊಟ್ಟಿಕೆರೆ ಸೋಮೇಗವ್ವಡರು ..	ಪಟೇಲ್
	4 ಡಿಟೋ ಹಸಗಲ್ ಪಟೇಲ್ ಪಟ್ಟದ ಸಿದ್ದಲಿಂಗಯ್ಯನವರು ..	ಡಿಟೋ
ನಾರ್ತ್ ಮೈಸೂರು ಯೂರೋಪಿಯರ್ಸ್ ಪ್ಲಾಂಟರ್ಸ್ ಅಸೋಸಿಯೇಷನ್ ..	1 ಡಿಟೋ ಸಿ. ಎಚ್. ಗಾಡ್‌ಫ್ರೆ ಸಾಹೇಬರು ..	ಕಾಫಿ ಪ್ಲಾಂಟರ್
ನಾರ್ತ್ ಮೈಸೂರು ನೇಟಿವ್ ಪ್ಲಾಂಟರ್ಸ್ ಅಸೋಸಿಯೇಷನ್ ..	1 ಡಿಟೋ ವೆಸ್ಟಾರದ ಶಾಮರಾಯರು ...	ಡಿಟೋ
	ಚಿತ್ರದುರ್ಗದ ಡಿಸ್ಟ್ರಿಕ್ಟು.	
ಚಿತ್ರದುರ್ಗ ತಾಲ್ಲೂಕು ...	1 ಮೆಸ್ಸರ್ ಕಾಶಿ ನರಸಿಕ್ಯಯ್ಯನವರು ..	ವರ್ತಕರು
	2 ಡಿಟೋ ಬಲಾಕಡಪ್ಪನವರು ..	ಡಿಟೋ
	3 ಡಿಟೋ ಮಾರಘಟ್ಟ ಬಸಪ್ಪನವರು ..	ಪಟೇಲ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಲಿಂಗಪ್ಪನವರು ..	ಮುರಗಮಠದ ಪಾರುಪತ್ತೇಗಾರ್ರು
	2 ಡಿಟೋ ಮಹಲಿಂಗಪ್ಪನವರು .	ಶಟ್ಟರು
ಡಿಸ್ಟ್ರಿಕ್ಟು ಲೋಕಲ್‌ಫಂಡ್ ಬೋರ್ಡು ..	1 ಡಿಟೋ ಕ್ಯಾಸಪುರದ ರಾಮಂಣನವರು ..	ಶಾನಭೋಗ್
	2 ಡಿಟೋ ನಾಡಿಗ ಸಿದ್ದರಾಮಪ್ಪನವರು ..	ಪಟೇಲ್
ಜಗ್ಳಕೆರೆ ತಾಲ್ಲೂಕು ..	1 ಡಿಟೋ ಗುರುರಾಜಪ್ಪನವರು ..	ಶಾನಭೋಗ್
	2 ಡಿಟೋ ಸುಬ್ಬಂಣನವರು ..	ಡಿಟೋ
	3 ಡಿಟೋ ಚನ್ನಪ್ಪಯ್ಯನವರು ..	ಜಮೀನ್ದಾರ್
ಹಿರಿಯೂರು ತಾಲ್ಲೂಕು ...	1 ಡಿಟೋ ಭೀಮರಾಯರು ..	ಕಂಟ್ರಾಕ್ಟರ್
	2 ಡಿಟೋ ದೊಡ್ಡಕಿಟ್ಟದಹಳ್ಳಿ ಕರಿಯಣ್ಣನವರು	ಜಮೀನ್ದಾರ್ರು
ಹೊಳಲ್‌ಕೆರೆ ತಾಲ್ಲೂಕು ..	1 ಡಿಟೋ ಗುಂಡೇರಿ ಗೋಪಾಲಯ್ಯನವರು ..	ಶಾನಭೋಗ್
	2 ಡಿಟೋ ತಾಳ್ಯ ಕೇಶವಪ್ಪನವರು ..	ಡಿಟೋ ಮತ್ತು ಜಮೀನ್ದಾರ್ರು
ಹೊಸದುರ್ಗ ಸಬ್ ತಾಲ್ಲೂಕು ..	1 ಡಿಟೋ ಗುಂಡೇರಿ ಮಲ್ಲಯ್ಯನವರು ..	ಜಮೀನ್ದಾರ್
ದಾವಣಗೆರೆ ತಾಲ್ಲೂಕು ..	1 ಡಿಟೋ ಹೊಲೆಯವನವರ ರುದ್ರಪ್ಪನವರು	ಜಮೀನ್ದಾರ್ ಮತ್ತು ವರ್ತಕರು
	2 ಡಿಟೋ ಹೊಸೂರ್ ನಂಜುಂಡರಾಯರು ..	ಜಮೀನ್ದಾರ್
	3 ಡಿಟೋ ಅಂದನೂರ್ ಶಿವಲಿಂಗಪ್ಪನವರು ..	ವರ್ತಕರು
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಮಗನಹಳ್ಳಿ ಷಡಕ್ಷರಪ್ಪನವರು ..	ಡಿಟೋ
ಹರಿಹರ ಸಬ್ ತಾಲ್ಲೂಕು ..	1 ಡಿಟೋ ಬಾಲಕೃಷ್ಣರಾಯರು ..	ಶಾನಭೋಗ್
ಡಿಟೋ ಮ್ಯುನಿಸಿಪಾಲಿಟಿ ..	1 ಡಿಟೋ ಅಡಿವಪ್ಪನವರು ..	ವರ್ತಕರು
ಜಗಳೂರು ತಾಲ್ಲೂಕು ..	1 ಡಿಟೋ ನರಸಿಂಗಪ್ಪನವರು ..	ಶಾನಭೋಗ್
	2 ಡಿಟೋ ದೇವಕೆರೆ ಗುರುಶಾಂತಪ್ಪನವರು ...	ಜಮೀನ್ದಾರ್ರು
ಮೊಳಕಾಲ್ಮುರು ತಾಲ್ಲೂಕು ..	1 ಡಿಟೋ ಜಿಂಕ ತಿಪ್ಪಯ್ಯನವರು ...	ದೇವಾಂಗದವರು
	2 ಡಿಟೋ ಕಾಟಪ್ಪನಾಯಕರು ...	ಜಮೀನ್ದಾರ್

ತಾರೀಖು 9ನೇ ಸೆಪ್ಟಂಬರ್ 1896.

ನಂ. 2714.—ಪಿ. 420, ಸ್ಯ 1883ನೇ ಜುಲೈ 11ನೇ ಮತ್ತು ಂ 190ನೇ ನಂಬರ್ ಗವರ್ನಮೆಂಟಿನ ಈ ಕೆಳಗೆ ಕಂಡ ಇಸ್ತಿಹಾರ್‌ನಾಮೆಯು ಸಕಲರ ತಿಳುವಳಿಕೆ ಬಗ್ಗೆ ಪುನಶ್ಚ ಘಾಯಿಷ್ಮಾಡಲ್ಪಟ್ಟಿರುತ್ತೆ:—

"ತಾಬೇದಾರೀ ಗವರ್ನಮೆಂಟ್ ಉದ್ಯೋಗಸ್ಥರುಗಳಿಂದ ಉದ್ಯೋಗಗಳು, ಬಡ್ತಿಗಳು ವ ಬಹಲ್‌ಗಳು ಮತ್ತು ಹೆಚ್ಚಾದ ವೇತನ ಗಳು ಇವುಗಳಿಗಾಗಿ ಅರ್ಜಿಗಳು ದಿವಾನರವರ ಆಫಿಸಿನಲ್ಲಿ ಬಾರಿಬಾರಿಗೂ ಕೊಡಲ್ಪಡುತ್ತಲಿವೆ. ಅಂಥಾ ಅರ್ಜಿಗಳಿಗೆ ಯಾವ ವಿಧವಾದ ಗಮನವೂ ಕೊಡುವದಿಲ್ಲ. ಅವುಗಳು ಆಯಾ ಇಲಾಖೆಗಳ ಮೊಖ್ತೇಸರರುಗಳ ಮೂಲಕ ಕಳುಹಿಸಲ್ಪಡಬೇಕು, ಅಥವಾ ಅರ್ಜಿದಾರನು ದಾಖಲಾಗಿದ್ದ ಇಲಾಖೆಯು ಮುಕೂಫ್ ಮಾಡಲ್ಪಟ್ಟಿದ್ದರೆ ಆತನಿಗೆ ನವುಕರಿಗಾಗಿ ಅಪ್ಪಣೆಯಾಗಿದ್ದ ಇಲಾಖೆಯ ಮೊಖ್ತೇಸರರ ಮೂಲಕ ಕಳುಹಿಸಲ್ಪಡಬೇಕು."

ತಾರೀಖು 15ನೇ ಸೆಪ್ಟಂಬರ್ 1896.

ನಂ. 3594.—ಮಿ. 764, ಸ್ಯ 1890ನೇ ಇಸವಿಯ ಮೈಸೂರ್ ಆರಂಸ್ ರೆಗ್ಯುಲೇಷನಿನ 22ನೇ ಸೆಕ್ಷನ್ ಅನುಸರಿಸಿ, ಸ್ಯ ದರ್ಖಾಡಲ್ಪಟ್ಟ 1895ನೇ ಮೇ 1ನೇ ಮತ್ತು ಂ ನಂ. Iನೇ ಇಸ್ತಿಹಾರ್‌ನಾಮೆಯ Iನೇ ಪ್ಯಾರಾ 8ನೇ ಕ್ಲಾಜಿನಲ್ಲಿ ಈ ಕೆಳಗೆ ಕಂಡ ದ್ದನ್ನು ಜಾಸ್ತಿಯಾಗಿ ಸೇರಿಸುವ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುತ್ತಾರೆ:—

"ಮ್ಯುನಿಸಿಪಲ್ ಕಮ್ಮಿಟಿಗಳು" ಎಂಬ ಮಾತುಗಳ ತರುವಾಯ "ಲೋಕಲ್‌ಫಂಡ್ ಬೋರ್ಡಿನ ಮತ್ತು ರೆಪ್ರಜಂಟೇಟಿವ್ ಸಂಘದ" ಎಂಬ ಮಾತುಗಳನ್ನು ಸೇರಿಸತಕ್ಕದ್ದು.

ತಾರೀಖು 16ನೇ ಸೆಪ್ಟಂಬರ್ 1896.

ನಂ. 3690.—ಜು. 383, ಈ ಕೆಳಗೆ ಕಂಡ ಸ್ಪೆಷಲ್ ಸಬ್ ರೆಜಿಸ್ಟ್ರಾರುಗಳ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ:—

(1) ದೇವನಹಳ್ಳಿಯ 3ನೇ ಗ್ರೇಡ್ ಸಬ್ ರೆಜಿಸ್ಟ್ರಾರ್ ಎ. ಮಹಾದೇವ ಪೊದಲಿಯಾರ್‌ರು ತುಮಕೂರಿಗೆ.

(2) ತುಮಕೂರು 3ನೇ ಗ್ರೇಡ್ ಸಬ್ ರೆಜಿಸ್ಟ್ರಾರ್ ಟಿ. ಬಿ. ವೆಂಕಟಾಚಾರ್‌ರು ದೇವನಹಳ್ಳಿಗೆ.

ನಂ. 3697.—ಜು. 389, ಮೂಡಗೆರೆ ತಾಲ್ಲೂಕು ಅಮಲ್‌ದಾರ್ ವ 2ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ನರಸಿಂಗರಾಯರಿಗೆ, 1859ನೇ ಇಸವಿಯ XIIIನೇ ನಂಬರ್ ಆಕ್ಟ್ (ಬ್ರೀಚ್ ಆಫ್ ಕಾಂಟ್ರಾಕ್ಟ್ ಆಕ್ಟ್) ಅನುಸರಿಸಿ ಬರುವ ಮೊಕದ್ದಮೆಗಳನ್ನು ದರ್ಯಾಫ್ತ್ ಮಾಡಲಿಕ್ಕೆ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ನಂ. 3695.—ಜು. 387, ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡಿನ 12ನೇ ಸೆಕ್ಷನ್ ಅನುಸರಿಸಿ ಮೂಡಗೆರೆ ತಾಲ್ಲೂಕು ಅಮಲ್‌ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟ್ ಸಿ. ನರಸಿಂಗರಾಯರು 2ನೇ ಕ್ಲಾಸಿನ ಮಾಜಿಸ್ಟ್ರೇಟರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 17ನೇ ಸೆಪ್ಟಂಬರ್ 1896.

ನಂ. 3785.—ಮಿ. 790, ಈ ವರುಷಕ್ಕಾಗಿ ದಸರಾ ರಜಾಗಳು 1896ನೇ ಅಕ್ಟೋಬರ್ 6ನೇ ಮಂಗಳವಾರದ ಲಾಗಾಯತು 23ನೇ ಶುಕ್ರವಾರದ ವರಿಗೆ ಉಭಯ ದಿನಗಳೂ ಸೇರಿ ಕೊಡಲ್ಪಡುವವು.

2. ಜರೂರಿಯಾತ್ ಕೆಲಸದ ಬಗ್ಯಾಗಿ ಇಲಾಖೆಗಳ ಮೊಖ್ತೇಸರರುಗಳಿಂದ ಏರ್ಪಾಡುಗಳು ಮಾಡಲ್ಪಡುವವು.

ತಾರೀಖು 19ನೇ ಸೆಪ್ಟಂಬರ್ 1896.

ನಂ. 3894.—ಜು. 402, ಮೆಸ್ಟರ್ ಟಿ. ನರಹರಿರಾವ್, ಎಂ. ಎಲ್., ಯವರು ನಂದೀದುರ್ಗ ಡಿವಿಜ್ ಡಿಸ್ಟ್ರಿಕ್ಟ್ ವ ಸೆಷನ್ಸ್ ಕೋರ್ಟಿನ ಚಾರ್ಜನ್ನು ಮೆಸ್ಟರ್ ಎಸ್. ಆರ್. ಸುಬ್ಬಾಯ ಅಯ್ಯರ್, ಬಿ. ಏ., ಯವರಿಂದ 1896ನೇ ಸೆಪ್ಟಂಬರ್ 12ನೇ ಮಧ್ಯಾಹ್ನದ ಪೂರ್ವಾಹ್ನದಲ್ಲಿ ವಹಿಸಿದ್ದರಿಂದ ಅವರಿಗೆ 1896ನೇ ಸೆಪ್ಟಂಬರ್ 5ನೇ ಮತ್ತು ಂ 3342.—ಜು. 333ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಪ್ರಿವಿಲೀಜ್ ರಜಾ ಪೈಕಿ ಉಪಯೋಗಿಸಿಕೊಳ್ಳದ ಭಾಗವನ್ನು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 31ನೇ ಆಗಸ್ಟ್ 1896.

ನಂ. 2362.—ರೆ. ಫೈ. 161-92, ಸ್ಯ 1896ನೇ ಜುಲೈ 29ನೇ ಮತ್ತು ಂ 1173.—ರೆ. ಫೈ. 161-92ನೇ ನಂಬರ್ ಇಸ್ತಿಹಾರ್‌ನಾಮೆ ಅನುಸರಿಸಿ, ಮೈಸೂರ್ ಗವರ್ನಮೆಂಟಿನವರು ಅಪ್ಪಣೆ ಕೊಡುವದೇನಂದರೆ,—ಮೈಸೂರ್ ಸ್ಟೇಟ್ ಲೈಫ್ ಇನ್ಷ್ಯೂರೆನ್ಸಿಗೆ ಸಂಬಂಧಪಟ್ಟ ರೂಲ್ಸಿನ 6ನೇ ರೂಲಿಗೆ ಈ ಕೆಳಗೆ ಕಂಡದ್ದು ಬದಲಾಗಿ ಸೇರಿಸಲ್ಪಡತಕ್ಕದ್ದು:—

6. "ಈ ರೂಲುಗಳು ಜಾರೀಗೆ ಬಂದ ತರುವಾಯ ಮೈಸೂರ್ ಗವರ್ನಮೆಂಟ್ ನವುಕರಿಗೆ ದಾಖಲಾಗಬಹುದಾದ ದರೋಬಸ್ತು "ಜನಗಳೂ ಅವರು ಗವರ್ನಮೆಂಟ್ ನವುಕರಿಗೆ ದಾಖಲಾಗುವ ತಾರೀಖಿನಿಂದಲೂ ಅಥವಾ 21 ವರುಷಗಳ ವಯಸ್ಸಿನ ಪೂರ್ವವೇ "ಗವರ್ನಮೆಂಟ್ ನವುಕರಿಗೆ ಸೇರುವಂಥಾವರ ವಿಷಯದಲ್ಲಿ 20 ವರುಷ ಆರು ತಿಂಗಳುಗಳ ವಯಸ್ಸು ಪೂರೈಸಿದ ತಾರೀಖಿನಿಂದಲೂ, "ಅಪೂರ್ವ ಸಂದರ್ಭಗಳಲ್ಲಿ ಗವರ್ನಮೆಂಟಿನವರಿಂದ ಪ್ರತ್ಯೇಕವಾಗಿ ವಿನಾಯಿಸಲ್ಪಟ್ಟಿದ್ದ ಹೊರ್ತು, ಇನ್ಷ್ಯೂರೆನ್ಸ್ ಅವಶ್ಯಕವಾಗಿರತ "ಕ್ಕದ್ದು. 45 ವರುಷಗಳ ವಯಸ್ಸು ಮೀರಿದ ಯಾ 10 ರೂಪಾಯಿಗಳ ತಲಬಿಗೆ ಕೀಳ್ಪಟ್ಟ ಯಾವ ಆಫಿಸರರು ಮೊದಲಿನ ಯಾ ಆ "ತರುವಾಯದ ಇನ್ಷ್ಯೂರೆನ್ಸಿಗೆ ಅರ್ಹರಾಗಿರುವದಿಲ್ಲ."

ತಾರೀಖು 27ನೇ ಆಗಸ್ಟ್ 1896.

ನಂ. 2245.—ಫಾ. ಫೈ. 96.—95, ಸ|| 1878ನೇ ಇನವಿಯ ಫಾರೆಸ್ಟ್ ರೂಲ್ಸಿನ 9ನೇ ಸೆಕ್ಷನ್ ನಿಯಮಗಳನುಸರಿಸಿ, ಮೈಸೂರ್ ಗವರ್ನಮೆಂಟನವರು ಪ್ರಸಿದ್ಧಪಡಿಸುವದೇನಂದರೆ,—ಇದರಡಿಕಂಡ ಕೋಲಾರ್ ಡಿಸ್ಟ್ರಿಕ್ಟಿನಲ್ಲಿರುವ ಸರಹದ್ದು ವಿಂಗಡಿಸಿ ವ್ಯವಸ್ಥೆ ಮಾಡಲ್ಪಟ್ಟ ಫಾರೆಸ್ಟುಗಳು ಮೇಲೆ ಹೇಳಲ್ಪಟ್ಟ ರೂಲ್ಸಿನ 1ನೇ ರೂಲ್ ಅನುಸರಿಸಿ, ಸ್ಟೇಟ್ ಫಾರೆಸ್ಟುಗಳಾಗಿ ವಿಂಗಡಿಸಲ್ಪಡತಕ್ಕದ್ದು:—

ತಾಲ್ಲೂಕು.	ಫಾರೆಸ್ಟಿನ ಹೆಸರು.	ಸುಮಾರು ವಿಸ್ತೀರ್ಣ.	ಚಕ್ಕುಬಂದಿ
ಚಿಂತಾಮಣಿ ತಾಲ್ಲೂಕು ವ ಶ್ರೀನಿವಾಸಪುರ ಸಬ್ ತಾಲ್ಲೂಕ	ರಾಯಲ್‌ಪಾಡ್ ಸ್ಟೇಟ್ ಫಾರೆಸ್ಟು, ಮುದುಮುಡುಗು ಸುಣಕಲ್ ಬ್ಲಾಕ ನಂ. 1.	21½ ಚದುರ ಮೈಲಿಗಳು.	ಉತ್ತರಕ್ಕೆ.—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟಲ್ಲಿನು ಮುದುಮುಡುಗು ಗ್ರಾಮದ (ಸರ್ವೆ ನಂ. 144) ದೊಡ್ಡೇಶ್ವರ ಮಲೆಗುಟ್ಟದಿಂದ ಹೊರಟು ಸದರೀ ಗ್ರಾಮದ ಸರ್ವೆ ನಂ. 143, 142 ವ 345 ಇವುಗಳ ಕಡೆಗೂ ಹಾದು ಹೋಗುತ್ತದೆ. ಪೂರ್ವಕ್ಕೆ.—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಮತ್ತು ಉತ್ತರ ಆರ್ಕಾಟು ಡಿಸ್ಟ್ರಿಕ್ಟುಗಳು, ಸದರೀ ಲೈನು ಗುಂಟಪಲ್ಲಿ ಗ್ರಾಮದ ಸರ್ವೆ ನಂ. 16ರ ಕಡೆಗೂ ಯಡೆಬಿಡದೆ ಹೋಗಿ, ಬೆಂಗಳೂರು ಕಡಪಾ ಹೈ ರೋಡಿನ ಮೂರು ಖಾಂದುಗಳು ವ ಎಲ್ಲೆ ಕಲ್ಲಿನ ಸವಿೂಪ ಹಾದು ಮೇಲ್ಕಂಡ ಗ್ರಾಮದ ಸರ್ವೆ ನಂ. 17 ವ 18 ಮತ್ತು (ಸುಣಕಲ್ ಗ್ರಾಮದ) ಸರ್ವೆ ನಂ. 20, (ಜಿದಮಾಕಲಪಲ್ಲಿ ಗ್ರಾಮದ) ಸರ್ವೆ ನಂ. 47 ವ 52, (ಮುಲ್‌ಗೊಲ್‌ಪಲ್ಲಿ ಗ್ರಾಮದ) ಸರ್ವೆ ನಂ. 1 ಮತ್ತು (ಕೊಂಟಿಂಪಲ್ಲಿ ಗ್ರಾಮದ) ಸರ್ವೆ ನಂ. 100 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ.—ಹದ್ದು ವಿಂಗಡಿಸಲ್ಪಟ್ಟ ಲೈನು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ 85, (ಪಂದಿವಾರಪಲ್ಲಿ) ಸರ್ವೆ ನಂ. 15, (ಸಾತನೂರ) ಸರ್ವೆ ನಂ. 5, (ಕೊತ್ತಿ ಪೇಟೆ) ಸರ್ವೆ ನಂ. 57, 137, 127, 111, 112, 94 ವ 89 ಮತ್ತು ಮರಿಮಾಕಲಪಲ್ಲಿಯ ಸರ್ವೆ ನಂ. 47, ಕುರಪಲ್ಲಿಯ ಸರ್ವೆ ನಂ. 15 ಮತ್ತು ತುಪ್ಪಲ್ಲಿ ಗ್ರಾಮದ ಸರ್ವೆ ನಂ. 62 ಇವುಗಳ ಕಡೆಗೂ ಹೋಗಿ ಬೆಂಗಳೂರು ಕಡಪಾ ಹೈ ರೋಡಿನ 64ನೇ ಮೈಲಿ ಕಲ್ಲಿನಬಳಿ ಕೊನೆ ಮುಟ್ಟುತ್ತದೆ. ಪಶ್ಚಿಮಕ್ಕೆ.—ಮೇಲ್ಕಂಡ ಸ್ಥಳದಿಂದ ಬೆಂಗಳೂರು, ಕಡಪಾ ಹೈ ರೋಡು 68ನೇ ಮೈಲಿಕಲ್ಲಿನ ವರಿವಿಗೆ ಪಶ್ಚಿಮ ಸರಹದ್ದಾಗಿ, ಅತರುವಾಯ 4 ವ 5ನೇ ಫರ್ಲಾಂಗ್ ಕಲ್ಲುಗಳ ಮಧ್ಯೆ ಈ ರಸ್ತೆಯನ್ನ ದಾಟಿ, ಗುಂಟಪಲ್ಲಿಯ ಸರ್ವೆ ನಂ. 14, ತಿಮ್ಮಲಪಲ್ಲಿಯ ಸರ್ವೆ ನಂ. 26, ಮುಳ್ಳುಮುತ್ತುಕಪಲ್ಲಿಯ ಸರ್ವೆ ನಂ. 1, ಮುದುಮುಡುಗಿನ ಸರ್ವೆ ನಂ. 140 ವ 141, ಬೊಜ್ಜಿಡಿಪಲ್ಲಿ ಗ್ರಾಮಗಳ ಸರ್ವೆ ನಂ. 19 ವ 1 ಇವುಗಳ ಕಡೆಗೂ ಹೋಗಿ, ಹೊರಟ ಸ್ಥಳವನ್ನು ಕೇರುತ್ತದೆ.
	ಬ್ಲಾಕ ನಂ. II, ವಲ್ಲಿಕೊಂಡ ಫಾರೆಸ್ಟು.	7⅞ ಚದುರ ಮೈಲಿಗಳು.	ಪೂರ್ವಕ್ಕೆ.—ಹದ್ದು ವಿಂಗಡಿಸಲ್ಪಟ್ಟ ಲೈನು ಕೊತ್ತವಾರಪಲ್ಲಿಯ ಸರ್ವೆ ನಂ. 17ರಿಂದ ಹೊರಟು, ವೇಪಲಪಲ್ಲಿಯ ಸರ್ವೆ ನಂ. 20 ವ 119, ತಿಮ್ಮಲಪಲ್ಲಿಯ ಸರ್ವೆ ನಂ. 120 ವ 142 ಮತ್ತು ಮಂಜೇವಾರಪಲ್ಲಿ ಗ್ರಾಮಗಳ ಸರ್ವೆ ನಂ. 93 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ.—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಖನವನಪಲ್ಲಿಯ ಸರ್ವೆ ನಂ. 22, ಗುಡಸ್ಪಾರಪಲ್ಲಿಯ ಸರ್ವೆ ನಂ. 29, ಉಪ್ಪಾರಪಲ್ಲಿಯ ಸರ್ವೆ ನಂ. 42 ಮತ್ತು ಯರ್ರಂವಾರಪಲ್ಲಿ ಗ್ರಾಮಗಳ ಸರ್ವೆ ನಂ. 54 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ.—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಪತ್ತೂರ ಸರ್ವೆ ನಂ. 45, ತಂದ್ರಂಪಲ್ಲಿಯ ಸರ್ವೆ ನಂ. 26, ಬಲು ಮೊರಿಯ ಸರ್ವೆ ನಂ. 11 ವ 107, ಕೊತ್ತಪಲ್ಲಿಯ ಸರ್ವೆ ನಂ. 36, 11, 10, 100, 99 ವ 50 ಮತ್ತು ಕುರಗಪಲ್ಲಿ ಗ್ರಾಮಗಳ ಸರ್ವೆ ನಂ. 81 ವ 96 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ.—ಮದ್ರಾಸ್ ಪ್ರೆಸಿಡೆನ್ಸಿಯ ಕಡಪಾ ಡಿಸ್ಟ್ರಿಕ್ಟು, ಸದರೀ ಲೈನು ಕುರಗಪಲ್ಲಿಯ ಸರ್ವೆ ನಂ. 81 ವ 96, ವಾಣೀಶ್ವರಪಲ್ಲಿಯ ಸರ್ವೆ ನಂ. 52, ಕೊತ್ತಪಲ್ಲಿಯ ಸರ್ವೆ ನಂ. 50 ವ 99 ಮತ್ತು ಕೊತ್ತವಾರಪಲ್ಲಿ ಗ್ರಾಮಗಳ ಸರ್ವೆ ನಂ. 1 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನ ಕೇರುತ್ತದೆ.
	ಬ್ಲಾಕ ನಂ. III, ವಾಲೀಶ್ವರಬೆಟ್ಟ ಫಾರೆಸ್ಟು.	2⅝ ಚದುರ ಮೈಲಿಗಳು.	ಪೂರ್ವಕ್ಕೆ.—ಮದ್ರಾಸ್ ಪ್ರೆಸಿಡೆನ್ಸಿಯ ಉತ್ತರ ಆರ್ಕಾಟು ಡಿಸ್ಟ್ರಿಕ್ಟು, ಹದ್ದು ವಿಂಗಡಿಸಲ್ಪಟ್ಟ ಲೈನು ಬೂವಲಪಲ್ಲಿಯ ಸರ್ವೆ ನಂ. 8ರಿಂದ ಹೊರಟು, ಕೋನಂಪಲ್ಲಿಯ ಸರ್ವೆ ನಂ. 40 ವ 28 ಮತ್ತು ಗುಟ್ಟಪಲ್ಲಿ ಗ್ರಾಮಗಳ ಸರ್ವೆ ನಂ. 34 ಇವುಗಳ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ.—ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಟ್ಟಪಲ್ಲಿಯ ಸರ್ವೆ ನಂ. 33 ವ 34, ಕೋನಂಪಲ್ಲಿಯ ಸರ್ವೆ ನಂ. 4, ಬೋಮನಪಲ್ಲಿಯ ಸರ್ವೆ ನಂ. 10 ವ 56 ಮತ್ತು ಬಾಚವಾರಪಲ್ಲಿ ಗ್ರಾಮಗಳ ಸರ್ವೆ ನಂ. 47 ಇವುಗಳ ಕಡೆಗೂ ಹೋಗುತ್ತದೆ.

ತಾಲ್ಲೂಕು.	ಫಾರೆಸ್ಟಿನ ಹೆಸರು.	ಪುರ್ವೋತ್ತರ ವಿಸ್ತೀರ್ಣ.	ಚಕ್ಕುಬಂದಿ.
ಚಿಂತಾಮಣಿ ತಾಲ್ಲೂಕು ಮತ್ತು ಶ್ರೀನಿವಾಸಪುರ ಸಬ್‌ತಾಲ್ಲೂಕು	ಬ್ಲಾಕ್ ನಂ. III, ವಾಲೇಶ್ವರ ಪೆಟ್ಟ ಫಾರೆಸ್ಟ್.	2⅝ ಚದುರ ಮೈಲಿಗಳು.	ಪಶ್ಚಿಮಕ್ಕೆ —ಈ ಸ್ಥಳದಿಂದ ಅದು ಹಿಂದೆ ಹೇಳಿದ ಗ್ರಾಮದ ಸರ್ವೆ ನಂ. 16 ಮತ್ತು ಇಲದೊಣೆ ಗ್ರಾಮದ ಸರ್ವೆ ನಂ. 197 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ —ಮೇಲ್ಕಂಡ ಸ್ಥಳದಿಂದ ಸದರೀ ಲೈನು ಗುಂಜಾರಗೋನಪಲ್ಲಿಯ ಸರ್ವೆ ನಂ. 1, ಮೂಕವಾರಪಲ್ಲಿ ಗ್ರಾಮಗಳ ಸರ್ವೆ ನಂ. 35 ಮತ್ತ 45 ಇವುಗಳ ಕಡೆಗೂ ಹಾದು ಹೊರಟ ಸ್ಥಳವನ್ನ ಕೇರುತ್ತದೆ.
ಚಿಂತಾಮಣಿ	ಅಡಗಲ್ಲು ನೆಲವಂಕಿ ಜಂಗಲ್.	5⅓ ಚದುರ ಮೈಲಿಗಳು.	ಪೂರ್ವಕ್ಕೆ —ಹದ್ದು ವಿಂಗಡಿಸಲ್ಪಟ್ಟ ಲೈನು ಬುರ್ಗಮಾಕಲಪಲ್ಲಿ ಗ್ರಾಮದ ಸರ್ವೆ ನಂ. 44ರಿಂದ ಹೊರಟು ತೂಪಲ್ಲಿ ಗ್ರಾಮದ ಸರ್ವೆ ನಂ. 32ರ ಕಡೆಗೂ ಹೋಗುತ್ತದೆ. ದಕ್ಷಿಣಕ್ಕೆ —ಸದರೀ ಲೈನು ಅಲ್ಲಿಂದ ಹೊರಟು ಮಂಚಿನೀಳ್ಳು ಕೋಟೆಯ ಸರ್ವೆ ನಂ. 188, ಗೊಲ್ಲಪಲ್ಲಿಯ ಸರ್ವೆ ನಂ. 16, ಪೂತ ನೆಲವಂಕಿಯ ಸರ್ವೆ ನಂ. 18, ಸೊಣಪಲ್ಲಿಯ ಸರ್ವೆ ನಂ. 14 ಮತ್ತ 30, ಕುರಪಲ್ಲಿಯ ಸರ್ವೆ ನಂ. 69, ತಿಮ್ಮನಪಲ್ಲಿ ಗ್ರಾಮಕ್ಕೆ ಕೇರಿದ ಖರಾಬ್ ಜಮೀರ್ತ ವರಿವಿಗೂ ಮತ್ತು ಕೊಡಪಲ್ಲಿಯ ಸರ್ವೆ ನಂ. 17 ಇವುಗಳ ಕಡೆಗೂ ಹೋಗುತ್ತದೆ. ಪಶ್ಚಿಮಕ್ಕೆ —ಮೇಲ್ಕಂಡ ಸ್ಥಳದಿಂದ ಸದರೀ ಲೈನು ಹೊರಟು ದಿಗವಮಾರಂಪಲ್ಲಿಯ ಸರ್ವೆ ನಂ. 61, 67 ಮತ್ತ 64, ತಿಮ್ಮನಪಲ್ಲಿಯ ಸರ್ವೆ ನಂ. 26, 40, 66, 72 ಮತ್ತ 52 ಮತ್ತು ಕಂಬಲಪಲ್ಲಿಯ ಸರ್ವೆ ನಂ. 27 ಇವುಗಳ ಕಡೆಗೂ ಹೋಗುತ್ತದೆ. ಉತ್ತರಕ್ಕೆ —ಈ ಸ್ಥಳದಿಂದ ಸದರೀ ಲೈನು ಹೊರಟು ತುಮ್ಮೂರು ಪಲ್ಲಿಯ ಸರ್ವೆ ನಂ. 39, 28, 112, ಅಡಗಲ್ಲ ಗ್ರಾಮದ ಸರ್ವೆ ನಂ. 87, 79, 189 ಮತ್ತ 156 ಇವುಗಳ ಕಡೆಗೂ ಹೋಗಿ ಹೊರಟ ಸ್ಥಳವನ್ನು ಕೇರುತ್ತದೆ.

ತಾರೀಖು 5ನೇ ಸೆಪ್ಟಂಬರ್ 1896.

ನಂ. 2632.—ರೆ. ಫೈ. 89—96, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 172ನೇ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ಬಿ. ಜೆ. ಕುಮಾರಸಾಮಿ ನಾಯಿಕರವರಿಗೆ, 1896ನೇ ಸೆಪ್ಟಂಬರ್ 5ನೇ ಮಕ್ಕಂ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಬಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 2689.—ಫಾ. ಫೈ. 7—96, ಶಿವಮೊಗ್ಗಾ ಡಿಸ್ಟ್ರಿಕ್ಟು ಫಾರೆಸ್ಟುಗಳ ಅಸಿಸ್ಟೆಂಟ್ ಕಂಸರ್‌ವೇಟರ್ ಮೆಸ್ಸರ್ ಜೆ. ಜೆ ಮೋಷ್ಟೀರೋಯವರಿಗೆ, 1896ನೇ ಆಗಸ್ಟ್ ಗುರ್ರೇ ತಾರೀಖು ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 2692.—ಫಾ. ಫೈ. 1—96, ಮೈಸೂರ ಸರ್ವಿಸ್ ರೆಗ್ಯುಲೇಷ್ಯಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಫಾರೆಸ್ಟುಗಳ ಸಬ್ ಅಸಿಸ್ಟೆಂಟ್ ಕಂಸರ್‌ವೇಟರ್ ಮೆಸ್ಸರ್ ಪಿ. ಈ. ಬೆರ್ಸಯವರಿಗೆ, 1896ನೇ ಆಗಸ್ಟ್ 24ನೇ ಮಕ್ಕಂ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 9ನೇ ಸೆಪ್ಟಂಬರ್ 1896.

ಅಶುದ್ಧ.

ನಂ. 2684.—ಫಾ. ಫೈ. 27—95, ಕೆಲವು ಫಾರೆಸ್ಟು ಆಫಿಸರುಗಳಿಗೆ ಹಂಗಾಮಿಯಾದ ಬಡ್ತಿಗಳನ್ನ ಹುಕುಂ ಮಾಡಿರುವ 1896ನೇ ಆಗಸ್ಟ್ 19ನೇ ಮಕ್ಕಂ 1893.—ಫಾ. ಫೈ. 27–95ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ ನಾಮೆಯಲ್ಲಿರುವ "1896ನೇ ಏಪ್ರಲ್ 12" ಎಂಬ ಮಾತುಗಳಿಗೆ ಬದಲಾಗಿ "1896ನೇ ಮಾರ್ಚಿ 12" ಎಂಬದಾಗಿ ಓದತಕ್ಕದ್ದು.

ತಾರೀಖು 11ನೇ ಆಗಸ್ಟ್ 1896.

ನಂ. 1618.—ಎಕ್ಸೈ. 64, ಸ್ರ 1881ನೇ ಇಸವಿಯ XXIIನೇ ನಂಬರ್ ಎಕ್ಸೈಜ್ ಆಕ್ಟಿನ 55ನೇ ಸೆಕ್ಷನಿನಿಂದ ಕೊಡಲ್ಪಟ್ಟ ಅಧಿಕಾರಗಳ ಚೆಸೆಯಿಂದ ಕಂಪ್ಟ್ರಿ ಬೀರು ಅಂಗಡಿಗಳ ಮಾರಾಟದ ಬಗ್ಯೆ ಮತ್ತು ಕಂಪ್ಟ್ರಿ ಬೀರು ಯಾ ಪೋರ್ಟರು ಬಿಲ್ಲೆ ರೆಯಾಗಿ ಮಾರುವದಕ್ಕೆ ಲೈಸೆನ್ಸಿಗಾಗಿಯೂ ನೋಟಿಸಿನ ಈ ಕೆಳಗೆ ಕಂಡ ನಮೂನೆಯನ್ನು ಮೈಸೂರು ಗವರ್ನಮೆಂಟಿನವರು ವಿಧಿಸಿರುತ್ತಾರೆ:—

ನೇ ವರುಷಕ್ಕಾಗಿ ಲ್ಲಿ ಇಗತಕ್ಕ ಕಂಪ್ಟ್ರಿ ಬೀರು ಅಂಗಡಿಗಳ ಹರಾಜು ನೋಟಿಸು.

1. ಇದರಿಂದ ಪ್ರಸಿದ್ಧ ಪಡಿಸುವದೇನೆಂದರೆ—ಇದಕ್ಕೆ ಜೊಟಿಸಲ್ಪಟ್ಟ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮೂರು ಅಂಗಡಿಗಳ ಪ್ರತಿ ಬಂದರಲ್ಲೂ ಕಂಪ್ಟ್ರಿ ಬೀರು ಯಾ ಪೋರ್ಟರು 189 ನೇ ಜುಲೈ 1ನೇ ತಾರೀಖಿನಿಂದ ಪ್ರಾರಂಭಿಸಿ 189 ನೇ ಜೂನ್ 30ನೇ ತಾರೀಖಿಗೆ ಆಖೈರಾಗುವ ಹನ್ನೆರಡು ತಿಂಗಳುಗಳಿಗೆ ಚಾಲಕ್ಕಾಗಿ ಬಿಕರಿ ಮಾಡತಕ್ಕ ಬಗ್ಗೆ ಸ್ವಾತಂತ್ರ್ಯದ ಹಕ್ಕನ್ನು ಡಿಸ್ಟ್ರಿಕ್ಟು ಆಫಿಸಿನಲ್ಲಿ ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಿಂದ ಯಾ ಅವರಿಂದ ಅಧಿಕಾರ ಹೊಂದಿದ ಇತರ ಆಫಿಸರರಿಂದ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಹರಾಜಿನಲ್ಲಿ ಪ್ರತಿ ಸವಾಲ್‌ದಾರನೂ ಸವಾಲು ಮಾಡುವದಕ್ಕೆ ಪೂರ್ವ 50 ರೂಪಾಯಿ ಯಾ ಹರಾಜು ನಡಿಸತಕ್ಕ ಆಫಿಸರರಿಂದ ಗೊತ್ತು ಮಾಡಲ್ಪಡುಕುದಾದ ಇತರ ನ್ಯಾಯವಾದ ಮೊಬಲಗು ಠೇವಣಾತಿ ಇಡತಕ್ಕದ್ದು. ಪ್ರತಿ ಅಂಗಡಿಯೂ ಅಂಗೀಕರಿಸಲ್ಪಟ್ಟ ಚಡದರಖಾಸ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರ ಕ್ರಮವಾದ ಮಂಜೂರಾತಿಗೆ ಬಳಪಟ್ಟು ಕೊಡಲ್ಪಡುವದು. ಡೆಪ್ಯುಟಿ ಕಮ್ಮಿಷನರವರು ಸದರೀ ದರಖಾಸ್ತನ್ನ ತಮಗೆ ಯುಕ್ತ ತೋರುವಂತೆ ತಕ್ಕ ಕಾರಣಗಳು ತೋರಿಸದೆ ಮಂಜೂರು ಯಾ ತಳ್ಳುಪಡಿ ಮಾಡಲು ಸ್ವತಂತ್ರರಾಗಿರುತ್ತಾರೆ. ಹಾಗೆ ಕ್ರಮವಾಗಿ ಮಂಜೂರ್ಮಾಡಲ್ಪಟ್ಟ ದರಖಾಸ್ತು ಅಂಗೀಕರಿಸಿದಂತೆ ಭಾವಿಸಲ್ಪಡತಕ್ಕದ್ದು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ತಾವೇ ಖುದ್ದಾಗಿಯಾಗಲಿ ಯಾ ಅವರಿಂದ ಕ್ರಮವಾಗಿ ಅಪ್ಪಣೆ ಪಡೆದಿರುವ ಮುಖ್ತಾಲೀಕರಾಗಲಿ ಹಾಜರಾಗಬೇಕು.

3. ಹರಾಜು ಪೂರೈಸಿದ ಕೂಡ್ಲೆ ನಾಮಂಜೂರಾದ ಸವಾಲ್‌ದಾರರ ಠೇವಣಿ ಮೊಬಲಗುಗಳು ಈ ಕೆಳಗೆ ನಿಬಂಧಿಸಿರುವ ಮೇರೆ ಸರಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಡದೆ ಇರುವ ಪಕ್ಷಕ್ಕೆ ಅವರುಗಳಿಗೆ ವಾಪಸ್ ಮಾಡಲ್ಪಡುವವು. ಹರಾಜು ನಡಿಯುವ ಕಾಲದಲ್ಲಿ ಪ್ರತಿ ಅಂಗಡಿಗಾಗಿ ಯಾರ ಸವಾಲೆ ಅಂಗೀಕರಿಸಲ್ಪಡುತ್ತೋ ಅವರು ತಕ್ಷಣವೇ ಆ ಅಂಗಡಿಯ ಬಂದು ತಿಂಗಳ ಗುತ್ತಿಗೆ ಹಣದಲ್ಲಿ ರೂಪಾಯಿ 1ಕ್ಕೆ 10 ಆಣೆ ಭಾಗದ ಮೊಬಲಗನ್ನ ಠೇವಣಿ ಇಡಬೇಕು. ಹಾಗೆ ಇಡಲಿಕ್ಕೆ ತಪ್ಪಿದಲ್ಲಿ 2ನೇ ಪ್ಯಾರಾ ಅನುಸರಿಸಿ ಆತನಿಂದ ಇಟ್ಟಿರುವ ಠೇವಣಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಟ್ಟು ಸದರೀ ಅಂಗಡಿಯು ಪುನ್ಹ ಮೇಲೆ ಕಂಡ ಪ್ರಕಾರ ಹರಾಜಿಗೆ ಬಳಪಟ್ಟು ತಕ್ಷಣವೇ ಹರಾಜಾಗುವದಲ್ಲದೆ ಆತನು ಪುನಃ ಈ ಅಂಗಡಿಗಾಗಲಿ ಅಥವಾ ಇತರ ಯಾವ ಅಂಗಡಿಗಾಗಲಿ ಸವಾಲ್ ಮಾಡ ಕೂಡದು.

4. ಯಾರ ಹೆಸರಿಗೆ ಸದರೀ ಅಂಗಡಿಗಳು ಹರಾಜಿನಲ್ಲಿ ನಿಲ್ಲಲ್ಪಡುತ್ತೋ ಮತ್ತು 2 ವ 3ನೇ ಪ್ಯಾರಾಗಳಲ್ಲಿ ಕಂಡಂತೆ ಠೇವಣಿ ಮೊಬಲಗುಗಳನ್ನ ಕಟ್ಟಿರುತ್ತಾರೋ ಅವರು ಹರಾಜಿನ ತಾರೀಖು ಲಾಗಾಯತು 7 ದಿನಗಳೊಳಗಾಗಿ ಅವರಿಗೆ ಹರಾಜಿನಲ್ಲಿ ಬಿಡಲ್ಪಟ್ಟ ಪ್ರತಿ ಅಂಗಡಿಯ ಎರಡು ತಿಂಗಳ ಗುತ್ತಿಗೆ ಹಣಕ್ಕೆ ಸರಿಯಾಗುವ ಹಾಗೆ ಎಷ್ಟು ಮೊಬಲಗನ್ನ ಅವರ ಮೊದಲನೇ ಮತ್ತು ಎರಡನೇ ಠೇವಣಾತಿಗಳಿಗೆ ಕೇರಿಸಬೇಕಾಗಿರುತ್ತೋ ಅಷ್ಟು ಜಾಸ್ತೀ ಮೊಬಲಗನ್ನು ಠೇವಣಿ ಕಟ್ಟಿಇದಕ್ಕೆ ಜಂಟಿಸರುವ ನಮೂನೆಯಲ್ಲಿ ಈ ಕೆಳಗೆ ವಿವರಿಸಿರುವ ಷರತ್ತುಗಳಿಗೆ ಒಳಪಟ್ಟು ಲೈಸೆನ್ಸನ್ನ ಪಡೆಯತಕ್ಕದ್ದು. ಮತ್ತು ಬಂದು ಎದುರು ಬಡಂಬಡಿಕೆಯನ್ನು ಬರೆದು ಕೊಡತಕ್ಕದ್ದು. ಈ ರೀತೀಲಿ ಠೇವಣಿ ಇಡುವದಕ್ಕೆ ಯಾ ಲೈಸೆನ್ಸ್ ಪಡೆಯಲಿಕ್ಕೆ ಯಾ ಯದುರು ಬಡಂಬಡಿಕೆ ಬರೆದು ಕೊಡಲಿಕ್ಕೆ ತಪ್ಪಿದರೆ ಸದರೀ ಅಂಗಡಿಯು ಹಾಗೆ ತಪ್ಪಿದ ಮನುಷ್ಯರ ಜವಾಬ್‌ದಾರಿ ಮೇಲೆ ಮರಳಿ ಹರಾಜು ಮಾಡಲ್ಪಡುತ್ತೆ. ಅಥವಾ ಈ ಇನ್ನಿತ್ತಾರಿನಲ್ಲಿ ಕಂಡ ಹರಾಜು ಮೊದಲೇ ಪೂರೈಸಿದ್ದ ಪಕ್ಷಕ್ಕೆ ಡೆಪ್ಯುಟಿ ಕಮ್ಮಿಷನರವರು ಅವರಿಗೆ ಯುಕ್ತ ತೋರುವಂತೆ ಬೇರೆ ವಿಧವಾಗಿ ವ್ಯವಸ್ಥೆ ಮಾಡುತ್ತಾರೆ. ಹರಾಜು ಮಂಜೂರಾದ ತರುವಾಯ ಕೊಂಡುಕೊಂಡವನು ಮೃತಪಟ್ಟರೆ ಜವಾಬ್‌ದಾರಿಯು ಆತನ ವಾರಸುದಾರರು ಅಥವಾ ಆತನಿಂದ ವರ್ಗ ಪಡೆದವರನ್ನ ಹೊಂದಿರುತ್ತೆ.

5. ಮೇಲಿನ ನಾಲ್ಕನೇ ಪ್ಯಾರಾ ಅನುಸರಿಸಿ ನಡಿಸಲ್ಪಡುವ ದುಸರಾ ಹರಾಜುಗಳು ಪ್ರತಿತ್ತಿಗೆ ತಪ್ಪಿದ ದರಖಾಸ್ತುದಾರನ ಜವಾಬ್‌ದಾರಿ ಮೇಲೆ ನಡಿಯುತ್ತವೆ. ಇದರಿಂದ ಆತನು ಆದಾಯವನ್ನೆಲ್ಲಾ ಕಳೆದುಕೊಂಡವನಾಗುತ್ತಾನೆ, ಮತ್ತು ದುಸರಾ ಹರಾಜು ಮಾಡುವಲ್ಲಿ ನಷ್ಟ ಸಂಭವಿಸುವ ಪಕ್ಷಕ್ಕೆ ಮೊದಲಿನ ಹರಾಜು ಪ್ರಕಾರ ಮತ್ತು ಅನುಸರಿಸಿ ಆತನು ಪೂರಾ ವಾಯಿದೆಗೆ ಕೊಡಬೇಕಾದ ಒಟ್ಟು ಮೊಬಲಗಿನ ಪೈಕಿ ದುಸರಾ ಹರಾಜಿನಲ್ಲಿ ಜಪ್ತಸವಾಲ್‌ದಾರನು ಕೊಡಬೇಕಾದ ಒಟ್ಟು ಮೊಬಲಗು ಜಾತ ಬಾಕಿ ಉಳಿಯುವದರನ್ನ ಆತನು ಭರ್ತಿಮಾಡಿ ಕೊಡತಕ್ಕದ್ದು. ಈ ಸಂದರ್ಭದಲ್ಲಿ ದುಸರಾ ಹರಾಜು ಮಾಡಿದ್ದರಿಂದ ಸಂಭವಿಸುವ ನಷ್ಟದ ಮೊಬಗಿನಲ್ಲಿ ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಂಡಿರುವ ಠೇವಣಿ ಮೊಬಲಗು ಪಜಾ ಮಾಡಿ ಬಾಕಿ ಏನಾದರೂ ಉಳಿದರೆ ಅದನ್ನ ಆತನಿಂದ ಜಮ್ಮಿ ಕಂದಾಯದ ಬಾಕಿಯಂತೆ ವಸೂಲ್ಮಾಡಲ್ಪಡುವದು. ಆದರೆ ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳಲ್ಪಟ್ಟ ಠೇವಣಿ ಮೊಬಲಗು ದುಸರಾ ಹರಾಜಿನಲ್ಲಿ ಸಂಭವಿಸುವ ನಷ್ಟಕ್ಕಿಂತಲೂ ಹೆಚ್ಚಾಗಿದ್ದರೆ ಅಂಥಾ ಠೇವಣಿ ಮೊಬಲಗನ್ನೆಲ್ಲಾ ಸರ್ಕಾರಕ್ಕೇನೇ ಜಮಾ ಮಾಡಿಕೊಳ್ಳಲ್ಪಡುವದು.

6. ಮೇಲಿನ 4ನೇ ಪ್ಯಾರಾ ಅನುಸರಿಸಿ ಪಡೆಯಬೇಕಾದ ಲೈಸೆನ್ಸು ಈ ಕೆಳಗೆ ಕಂಡ ಷರತ್ತುಗಳಿಗೆ ಬಳಪಟ್ಟಿರತಕ್ಕದ್ದು.

(1) ಈ ಲೈಸೆನ್ಸಿನಿಂದ ಕೊಡಲ್ಪಟ್ಟ ಹಕ್ಕು ನೀಲಗಿರಿಯಲ್ಲಿ ಮೆಸ್ಸರ್ಸ್ ಲೀಷ್‌ಮ್ಯಾನ್ ಅಂಡ್ ಕೋ ಯವರಿಂದಲೂ ಅಥವಾ ಕಿರ್ಕಿಯಲ್ಲಿ ಮೆಸರ್ಸ್ ಮಿರ್ಕ್ ಅಂಡ್ ಕೋ ಯವರಿಂದಲೂ ಕಾಯಿಸಲ್ಪಟ್ಟಕಂಟ್ರಿ ಬೀರು ಯಾ ಪೋರ್ಟರು ಮಾರುವದಕ್ಕೆ ಮಾತ್ರವೇ ವ್ಯಾಪಿಸುತ್ತೆ.

(2) ಸದರೀ ಸ್ವಾತಂತ್ರ್ಯದ ಹಕ್ಕನ್ನು ಪಡೆದುಕೊಂಡದ್ದಕ್ಕೆ ಕೊಡಬೇಕಾದ ಮೊಬಲಗು ತಾಲ್ಲೂಕು ಖಜಾನೆಗೆ 189ನೇ ಜುಲೈ ಲಾಗಾಯತು ಪ್ರಾರಂಭಿಸಿ ಸರಿಯಾದ ತಿಂಗಳು ಗಟ್ಟಿ ಬಿಸ್ತು ಗಳ ಪ್ರಕಾರ ಪಾವತಿ ಮಾಡುತ್ತಾ ಬರತಕ್ಕದ್ದು. ಪ್ರತಿ ಬಂದು ಬಿಸ್ತು ಅದು ಯಾವ ತಿಂಗಳಿಗೆ ಪಾವತಿಯಾಗತಕ್ಕದ್ದೋ ಆ ತಿಂಗಳಿನ ಗುತ್ತಿಗೆ ಮೊಬಲಗಾಗಿ ಭಾವಿಸಲ್ಪಡತಕ್ಕದ್ದು. ಪ್ರತಿ ಬಂದು ತಿಂಗಳ ಗುತ್ತಿಗೆ ಮೊಬಲಗೂ ಇದಕ್ಕಾಗಿ ಗೊತ್ತಾಗಿರುವ ಚಲ್ತ್ ಮೂಲಕ ಅದೇ ತಿಂಗಳ 20ನೇ ತಾರೀಖಿನಲ್ಲಿ ಪಾವತಿ ಮಾಡತಕ್ಕದ್ದು. ಲೈಸೆನ್ಸುದಾರನಿಂದ ಠೇವಣಿ ಇಟ್ಟಿರುವ ಎರಡು ತಿಂಗಳ ಗುತ್ತಿಗೆ ಮೊಬಲಗು ಗುತ್ತಿಗೆ ಅವಧಿಯು ಕಡೇ ಎರಡು ತಿಂಗಳಿಗಾಗಿ ಕೊಡತಕ್ಕ ಗುತ್ತಿಗೆ ಮೊಬಲಗಿಗೆ ಗೋಸ್ಕರ ತೆಗದುಕೊಳ್ಳಲ್ಪಡತಕ್ಕದ್ದು. ಸದರೀ ತಿಂಗಳ 20ನೇ ತಾರೀಖಿನೊಳಗಾಗಿ ಪಾವತಿ ಮಾಡಲಿಕ್ಕೆ ತಪ್ಪಿದಲ್ಲಿ ಡೆಪ್ಯುಟಿ ಕಮ್ಮಿಷನರವರು ಜಮ್ಮಿ ಕಂದಾಯ ವಸೂಲ್ಮಾಡುವದಕ್ಕೆ ಜಾರೀಲಿರುವ ನಿಬಂಧನೆಗಳನುಸರಿಸಿ ವರುಷಕ್ಕೆ ಕೇಕಡಾ 6 ರೂಪಾಯಿನಂತೆ ಬಡ್ಡೀನಿಸಿ ಬಾಕಿ ಮೊಬಲಗನ್ನು ವಸೂಲ್ಮಾಡುವದಕ್ಕೆ ತಕ್ಷಣ ಪ್ರವರ್ತಿಸತಕ್ಕದ್ದು. ಲೈಸೆನ್ಸುದಾರನು ತಾನು ಕೊಡಬೇಕಾಗಿರುವ ಗುತ್ತಿಗೆ ಮೊಬಲಗಿನಲ್ಲಿ ಯಾವ ಕಾರಣದಿಂದಲಾಗಲಿ ಮಾಫಿ ಯಾ ವಜಾ ಪಡೆಯುವದಕ್ಕೆ ಹಕ್ಕುದಾರನಾಗಿರುವದಿಲ್ಲ.

(3) ಲೈಸೆನ್ಸುದಾರನು ಆತನಿಂದ ಕೊಂಡೆಕೊಳ್ಳಲ್ಪಟ್ಟ ಕಂಟ್ರಿ ಬೀರು ಯಾ ಪೋರ್ಟರ ಪ್ರತಿ ಗ್ಯಾಲನಿಗೂ ಎರಡಾಣೆಯಂತೆ ಹಾಸಲು ಕೊಡತಕ್ಕದ್ದು.

(4) ಲೈಸೆನ್ಸುದಾರನಿಂದ ಕೊಂಡುಕೊಂಡು ಕಳುಹಿಸತಕ್ಕ ಕಂಟ್ರಿ ಬೀರು ಯಾ ಪೋರ್ಟರು ಬ್ರೂಯರಿಯಿಂದ ತಾಲ್ಲೂಕು ಅಮಲೀದಾರ್ರಿಗೆ ಸೀದಾ ರವಾನಿಸಲ್ಪಡತಕ್ಕದ್ದು. ಸರಕಿನೊಂದಿಗೆ ಲೆಟರ್ ಆಫ್ ಅಡ್ವೈಸ್ ಎಂಬ ರಹದಾರಿಯು ಇನ್ಮುಡಿಯಾಗಿರತಕ್ಕದ್ದು, ಅಸಲ್ ಪ್ರತಿಯು ತಾಲ್ಲೂಕು ಅಮಲ್‌ದಾರ್ರಿಗೂ ಮತ್ತು ಎರಡನೇ ಪ್ರತಿಯು ಎಕ್ಸೈಜ್ ಕಮ್ಮಿಷನರಿಗೂ ಕಳುಹಿಸತಕ್ಕದ್ದು. ಮೇಲೆ ನಮೂದಿಸಲ್ಪಟ್ಟ ಪರವ ಮೇರಿಗೆ ಹಾಸಲ್ ಮೊಬಲಗು ಗೊತ್ತಾದ ಚಲನಿನಲ್ಲಿ ಲೈಸೆನ್ಸುದಾರನಿಂದ ಪಾವತಿ ಆದ ನಂತರ ಅಮಲ್‌ದಾರ್ರು ಸರಕನ್ನು ಲೈಸೆನ್ಸುದಾರನು ತನ್ನ ಅಂಗಡಿಗೆ ಸಾಗಿಸಲು ತಮ್ಮಿಂದ ಯಾ ಈ ವಿಷಯದಲ್ಲಿ ಅವರಿಂದ ಅಧಿಕಾರ ಪಡೆದ ಇತರ ಆಫಿಸರರಿಂದ ಸೈನಾದ ಪ್ಯಾಸ್ ಮೂಲಕ ಅಪ್ಪಣೆ ಕೊಡತಕ್ಕದ್ದು.

(5) ಲ್ಲಿರತಕ್ಕ ಪ್ರತಿ ಆಂಗಡಿಯ ಲೈಸೆನ್ಸಿದಾರನೂ ಮ್ಯುನಿಸಿಪಲ್ ರೆಗ್ಯುಲೇಷನ್ ಅನುಸರಿಸಿ ತನ್ನ ಆಂಗಡಿಯ ಲೈಸೆನ್ಸಿನ ಕಾಲಕ್ಕಾಗಿ ವರುಷ ಒಂದಕ್ಕೆ 180 ರೂಪಾಯಿನ ದರದ ಮೇರಿಗೆ ಅಡ್ವಾನ್ಸಾಗಿ ರಿಜಿಸ್ಟ್ರೇಷನ್ ಫೀಯನ್ನು ಕೊಡತಕ್ಕದ್ದು.

(6) ಲೈಸೆನ್ಸಿದಾರನು ಸರ್ಕಾರದಿಂದ ಆಗಿಂದಾಗ್ಗೆ ವಿಧಿಸಲ್ಪಡಬಹುದಾದ ಅಳತೇ ಸಾಧನಗಳನ್ನು ಉಪಯೋಗಿಸತಕ್ಕದ್ದು, ಮತ್ತು ಲೆಖ್ಕಗಳು, ಬೀರು ಯಾ ಪೋರ್ಟರ್‌ರು ಸಾಗಿಸುವ ಬಗ್ಗೆ ಬೇಕಾದ ರಹದಾರಿಗಳು ಅಥವಾ ಪ್ಯಾಸುಗಳು ಇವುಗಳಿಗೆ ಅಚ್ಚು ನಮೂನೆಗಳು ಸ್ಥಳೀಕ ಎಕ್ಸೈಜ್ ಆಫಿಸರುಗಳಿಂದ ಕೊಂಡುಕೊಂಡು ತಾನೇ ವದಗಿಸಿಕೊಳ್ಳತಕ್ಕದ್ದು.

(7) ಲೈಸೆನ್ಸಿದಾರನು 189 ನೇ ಜುಲೈ 1ನೇ ಮರ್ತು ಮಿನಲ್ಲಿ ಸದರೀ ಆಂಗಡಿಯಲ್ಲಿ ಕಿಲ್ಕಿನಲ್ಲಿ ಉಳಿಯಬಹುದಾದ ಬಿಟ್ಟು ಹೋಗುವ ಲೈಸೆನ್ಸಿದಾರನಿಗೆ ಕೀದ ಅಂಥಾ ಬೀರು ಯಾ ಪೋರ್ಟರನ್ನ ಎಕ್ಸೈಜ್ ಕಮ್ಮಿಷನರವರಿಂದ ನಿಷ್ಕರ್ಷಿಸಲ್ಪಡಬಹುದಾದ ಲಾಗವಡು ಸದರೀಯವನಿಗೆ ಕೊಟ್ಟು ತೆಗದು ಕೊಳ್ಳಲಿಕ್ಕೆ ಬದ್ಧನಾಗಿರತಕ್ಕದ್ದು.

(8) ಲೈಸೆನ್ಸಿದಾರನು ಜಾರೀಲಿರುವ ಮತ್ತು ಸರ್ಕಾರದಿಂದ ಆಗಿಂದಾಗ್ಗೆ ಸಾದರ್ಮಾಡಲ್ಪಡಬಹುದಾದ ನಿಬಂಧನೆಗಳ ಮೇರೆ ನಡೆದುಕೊಳ್ಳಲು ಬದ್ಧನಾಗಿರತಕ್ಕದ್ದು.

(9) ಬಾಕಿ ಕರಾರುಗಳು ವ ಷರತ್ತುಗಳು ಇದಕ್ಕೆ ಲಗತ್ತಾದ ಲೈಸೆನ್ಸಿನಲ್ಲಿ ಉದಹರಿಸಿರುವ ಪ್ರಕಾರ ಇರತಕ್ಕದ್ದು.

7. ಲೈಸೆನ್ಸಿದಾರನಾಗಲಿ ಯಾ ಆತನ ತಿಳುವಳಿಕೆ ವ ಸಮ್ಮತಿಯಿಂದ ಆತನ ನೌಕರಿಯಲ್ಲಿರುವ ಯಾವ ಮನುಷ್ಯನಾಗಲಿ ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡೆದ ಪಕ್ಷದಲ್ಲಿ ಅಥವಾ ಲೈಸೆನ್ಸಿದಾರನು ತನ್ನ ಆಂಗಡಿಯನ್ನು ತೆಗಿಯುವದರಲ್ಲಿ ಯಾ ತನ್ನ ಕೆಲಸವನ್ನು ಸಶಿಯಾದ ಜಾಗರೂಕತೆ ಮತ್ತು ಲಕ್ಷ್ಯ ಇವುಗಳಿಂದ ಮಾಡಲು ಅಶ್ರದ್ಧೆ ಜರಿಗಿಸಿದ ಸಂದರ್ಭದಲ್ಲಿ ಡೆಪ್ಯುಟಿ ಕಮ್ಮಿಷನರು ಲೈಸೆನ್ಸಿದಾರನಿಗೆ ಅಂಥಾ ಪ್ರತಿ ಉಲ್ಲಂಘನೆ ಯಾ ಅಶ್ರದ್ಧೆಗೆ 10 ರೂಪಾಯಿಗಳಿಗೆ ವಿಸಾರದ ಜುರ್ಮಾನೆಯನ್ನು ವಿಧಿಸಲಿಕ್ಕೂ ಅಥವಾ ಡೆಪ್ಯುಟಿ ಕಮ್ಮಿಷನರವರ ಇಷ್ಟಾನುಸಾರ ಆವರಲ್ಲಿಟ್ಟಿರುವ ಕೀವಣಿ ವೊಬಲಗನ್ನ ದಂಡವಾಗಿ ದಾಖಲ್ಮಾಡಿಕೊಂಡಿರುತ್ತೆಂದು ಹುಕುಂ ಮಾಡಲಿಕ್ಕೂ ಮತ್ತು ಲೈಸೆನ್ಸನ್ನ ರದ್ದುಮಾಡಿ ಸದರೀ ಲೈಸೆನ್ಸಿದಾರನ ಜವಾಬ್ದಾರಿ ಮೇಲೆ ಮೇಲ್ಕಂಡ ಹಕ್ಕನ್ನು ಪುನಶ್ಚ ಹರಾಜು ಮಾಡಲಿಕ್ಕೂ ಮೊಖ್ತ್ಯಾರ್ರಾಗಿರತಕ್ಕದ್ದು. ಇದರಿಂದುಂಟಾಗುವ ಎಲ್ಲಾ ನಷ್ಟವನ್ನೂ ಲೈಸೆನ್ಸಿದಾರನು 189 ನೇ ಜುಲೈ ಗುರ್ತೀ ತಾರೀಖಿನಲ್ಲಿ ತನ್ನ ಆಂಗಡಿಯನ್ನು ತೆಗೆದು ಕೆಲಸ ನಡಿಸುವದರ ದೆಶೆಯಿಂದ ಸರ್ಕಾರಕ್ಕೆ ಉಂಟಾಗುವ ನಷ್ಟ ದೇಖೀಲು ಆತನಿಂದ ಭರ್ತೀ ಮಾಡಲ್ಪಡತಕ್ಕದ್ದು. ಗುತ್ತಿಗೆಯು ರದ್ದುಮಾಡಲ್ಪಟ್ಟಲ್ಲಿ ಪೂರಾ ಕಾಲದ ಗುತ್ತಿಗೆ ವೊಬಲಗು ತಕ್ಷಣ ಪಾವತಿ ಮಾಡತಕ್ಕದ್ದು, ಮತ್ತು ಅಂಥಾ ವೊಬಲಗು ಜಮ್ರ್ಮಾ ಕಂದಾಯದ ಬಾಕಿಗಳಂತೆ ಎಲ್ಲಾ ನಷ್ಟಗಳ ಸಹಿತ ವಸೂಲ್ಮಾಡಲ್ಪಡತಕ್ಕದ್ದು.

8. ಮೇಲಿನ ಹಿಂದಿನ ಷರತ್ತಿನಲ್ಲಿ ವಿಧಿಸಲ್ಪಟ್ಟ ದಂಡನೆಗಳು ಜಾರೀಲಿರುವ ಯಕ್ಸೈಜ್ ಕಾನೂನುಗಳಿಗೆ ಯಾ ರೂಲುಗಳಿಗೆ ವಿರೋಧವಾಗಿ ಮಾಡಲ್ಪಟ್ಟ ಯಾವ ತಕ್ಕೀರಿಗೂ ಲೈಸೆನ್ಸಿದಾರನನ್ನಾಗಲಿ ಯಾ ಆತನ ನೌಕರರನ್ನಾಗಲಿ ಆಪಾದಿಸಿ ದರ್ಯಾಫ್ತ್ ಕ್ರಮ ನಡಿಸಲು ಆತಂಕಪಡಿಸುವದಿಲ್ಲ.

ಷೆಡ್ಯೂಲ್,

ಹೆಸರು. ಲೈಸೆನ್ಸಿದಾರನ	ಆಂಗಡಿಯ ಸೀರಿಯಲ್ ನಂಬರ್.	ಆಂಗಡಿ ಇರುವ ಸ್ಥಳ. ಡೋರ್ ನಂಬರ್.	ಸ್ಥಳ.	ಹಾಲೀ ಲೈಸೆನ್ಸಿದಾರರ ಹೆಸರುಗಳು.	ಖರ್ಚು.		—ಯ 8 ತಿಂಗಳು.	ಗುತ್ತಿಗೆಯ.	ಷರಾ.
					ಪೀಪಾಯಿಗಳು	ಪೀಪಾಯಿಗಳು	ಪೀಪಾಯಿಗಳು	ರೂ.	

ಬೀರ್ ಲೈಸೆನ್ಸ್.

ಕಂಟ್ರಿ ಬೀರನ್ನು ಯಾ ಪೋರ್ಟರನ್ನು ಚಿಲ್ಲರೆಯಾಗಿ ಮಾರುವದಕ್ಕೆ ಲೈಸೆನ್ಸ್ (1881ನೇ ಇಸವಿಯ XXIIನೇ ನಂಬರ್ ಆಕ್ಟಿನ 12 ವ 13ನೇ ನಿಕರ್ಷಗಳನುಸರಿಸಿ ಕೊಡಲ್ಪಟ್ಟದ್ದು.)

1. ರಿಜಿಸ್ಟರ್ ನಂಬರ್.
2. ಲೈಸೆನ್ಸಿದಾರನ ಹೆಸರು.
3. ಮಾರುವವನ ಹೆಸರು.
4. ಸ್ಥಳ.

ಕಂಟ್ರಿ ಬೀರ್ ಮತ್ತು ಪೋರ್ಟರನ್ನು ನಂಬರ ಆಂಗಡಿಯಲ್ಲಿ ಚಿಲ್ಲರೆಯಾಗಿ ಮಾರುವದಕ್ಕೋಸ್ಕರ ಗೆ
ಈ ಕೆಳಗಿನ ಷರತ್ತುಗಳನುಸರಿಸಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಆದ ನಾವು ಇದರಿಂದ
ಅಧಿಕಾರವನ್ನು ಕೊಡುತ್ತೇವೆ:—

I. ಈ ಲೈಸೆನ್ಸ್ ಕ್ರಯ, ದಾನ, ಭೋಗ್ಯ ಅಥವಾ ಇನ್ಯಾವ ವಿಧದಿಂದಲೇ ಆಗಲಿ ಪರ್ಗವಾಗತಕ್ಕದ್ದಲ್ಲ, ಮತ್ತು ಇದರಲ್ಲಿ ನಮೂದಿರತಕ್ಕವರು ಶಿವಾಯಿ ಮತ್ತಾವ ಜನರೂ ಇದರ ಆಧಾರದ ಮೇಲೆ ಕಾರ್ಯಗಳನ್ನ ನಡಿಸಲಿಕ್ಕೆ ಅಧಿಕಾರವಿರುವದಿಲ್ಲ.

II. ದುಕಾನ್‌ದಾರನು ಲೈಸೆನ್ಸಿದಾರನಂತೆಯೇ ಈ ಲೈಸೆನ್ಸಿನ ಷರತ್ತುಗಳ ಪೈಕಿ ಯಾವದನ್ನಾದರೂ ತಪ್ಪು ನಡೆದರೆ ಇದರಲ್ಲಿ ನಮೂದಾಗುವ ದಂಡನೆಗಳಿಗೆ ಗುರಿಯಾಗಿರುತ್ತಾನೆ, ಅವು ಯಾವವಂದರೆ.

III. ಅವನು ಬೀರ್ ಯಾ ಪೋರ್ಟರನ್ನು ಪೀಪಾಯಿ ಅಥವಾ ಬುಡ್ಡಿಯಿಂದಾಗಲಿ ಆಂಗಡಿಯಲ್ಲಿ ಅಥವಾ ಹೊರಗಡೆಯಲ್ಲಿ ಕುಡಿಯಲಿಕ್ಕೆ ಮಾರಬೇಕ್ಕೇ ಹೊರ್ತು ಇತರ ಯಾವ ತರಹೇದ ಬೀರ್ ಯಾ ಪೋರ್ಟರನ್ನಾಗಲಿ ಮಾರಕೂಡದು, ಮತ್ತು ಆಂಗಡಿಯ ಹೊರಗಡೆ ಕುಡಿಯಲಿಕ್ಕೆ ಮಾರುವ ಸಂದರ್ಭದಲ್ಲಿ ಎಕ್ಸೈಜ್ ಇಲಾಖೆಯವರಿಂದ ಕೊಡಲ್ಪಡುವ ರಹದಾರಿಗಳ ಆಧಾರದ ಮೇಲೆ ಮಾರತಕ್ಕದ್ದಲ್ಲದೆ ಸದರೀ ರಹದಾರಿಯಲ್ಲಿನ ಷರತ್ತುಗಳಂತೆ ಮಾರುವವನೂ ಮತ್ತು ಕೊಂಡುಕೊಳ್ಳವನೂ ಈ ಉಭಯತ್ರರೂ ಖಂಡಿತವಾಗಿ ನಡೆದುಕೊಳ್ಳಬೇಕು. ಅಂಥಾ ರಹದಾರಿಗಳ ಆಧಾರದಮೇಲೆ ಹೊರಗೆ ಕುಡಿಯಲಿಕ್ಕೆ ಕೊಡಲ್ಪಡುವ ಬೀರ್ ಎರಡು ಇಂಪೀರಿಯಲ್ ಗ್ಯಾಲ್ಲನ್‌ಗಳು ಅಂದರೆ ಎಂಟು ಶೇರುಗಳಿಗಿಂತ ಹೆಚ್ಚಾಗಿರಕೂಡದು.

IV. ಅವನು ಪ್ರತ್ಯಕ್ಷವಾಗಿಯಾದರೂ ಪರೋಕ್ಷವಾಗಿಯಾದರೂ ಬೀರು ಯಾ ಪೋರ್ಟರು ಯಷ್ಟು ಮಟ್ಟಿಗಾದರೂ ಯಾವ ಯೂರೋಪಿಯರ್ ಆಫವಾ ನಾರ್ ಕಮ್ಮಿಷನೆಡ್ ಆಫಿಸರಿಗಾದರೂ ಯಾ ಪ್ರೈವೇಟ್ ಸೋಲ್ಜರಿಗಾದರೂ ಆಫವಾ ಸದರೀ ಜನಗಳಿಗೆ ಸಂಬಂಧಪಟ್ಟ ಯಾವ ಯೂರೋಪಿಯರ್ ಯಾ ಈಸ್ಟಿಂಡಿಯರ್ ಹೆಂಗಸರಿಗಾದರೂ ಮಾರಲೂ ಕೂಡದು. ಆಫವಾ ಕೊಡಲೂ ಕೂಡದು, ಅವನು, ಅವಳು ಯಾ ಅವರುಗಳಿಗೆ ತನ್ನ ಅಂಗಡಿಯಲ್ಲಿ ಆಫವಾ ಆಂಗಡಿಯ ಆವರಣದಲ್ಲಿ ಬೀರು ಯಾ ಪೋರ್ಟರು ಕುಡಿಯಲಿಕ್ಕೆ ಅವಕಾಶ ಕೊಡಕೂಡದು. ತನ್ನ ಅಂಗಡಿ ಯಾ ಅದಕ್ಕೆ ಕೇರಿದ ಆವರಣದಲ್ಲಿ ಜನಗಳು ಕುಡಿದು ನಿಷ್ಠಾಹತ್ತಿ ಬೀಳುವಂತೆ ಯಾ ಅವರು ಅಕ್ರಮವಾಗಿ ನಡಿಯುವಂತೆ ಅವಕಾಶ ಕೊಡಕೂಡದು, ಮತ್ತು ಅಂಗಡಿಯಲ್ಲಿ ಜಾಜಾ ವಗೈರೆ ಆಡುವಂತೆ ಮಾಡಕೂಡದು. ವ್ಯಭಿಚಾರಿಗಳನ್ನಾಗಲಿ ಯಾ ಬಹಿರಂಗವಾದ ದುರ್ನಡತೆಯುಳ್ಳ ಜನಗಳನ್ನಾಗಲಿ ತಿಳಿದು ತನ್ನ ಅಂಗಡಿಗೆ ಬರುವಂತೆ ಯಾದರೂ ಆಫವಾ ಅಂಗಡಿಯಲ್ಲಿರುವಂತೆಯಾದರೂ ಮಾಡಕೂಡದು. ಸೋಲ್ಜರಿಗಾದರೂ ಯಾ ಇತರರಿಗಾದರೂ ಅವರುಗಳು ಫರಾರಿಯಾದವರೆಂದು ತಿಳಿದು ಅಥವಾ ಅಂತವರೆಂದು ನಂಬುವದಕ್ಕೆ ಕಾರಣವಿದ್ದೂ ಅಂತವರಿಗೆ ತನ್ನ ಅಂಗಡಿಯಲ್ಲಿ ಪುನಃಪೂರ್ತಿಯಾಗಿ ಸ್ಥಳ ಕೊಡಲೂ ಕೂಡದು ಯಾ ಛಪಾಮಿಸಿ ಇಡಲೂ ಕೂಡದು. ಗುಮ್ಮಾನೀ ನಡತೆಗಳುಳ್ಳ ಜನಗಳ ವಿಷಯಕವಾದ ವರ್ತಮಾನವನ್ನ ಮಾಜಿಸ್ಟ್ರೇಟರಿಗೆ ಯಾ ಪೊಲೀಸ್ ಆಫಿಸರರಿಗೆ ತಿಳಿಸಬೇಕು, ಮತ್ತು ಉದ್ಯೋಗದ ಮೇಲಿರುವಾಗ ಯಾವ ಪೊಲೀಸ್ ಆಫಿಸರರಿಗಾಗಲಿ, ರೆವ್ಹೆ ನ್ಯೂಕರನಿಗಾಗಲಿ ಯಾ ಯಕ್ಸೈಜ್ ಆಫಿಸರರಿಗಾಗಲಿ ಬೀರು ಯಾ ಪೋರ್ಟರನ್ನು ಮಾರಲೂ ಕೂಡದು ಆಫವಾ ಕೊಡಲೂ ಕೂಡದು.

V. ಅವನು ತನ್ನ ಅಂಗಡಿಗೆ ಹೊರಪಾರ್ಶ್ವದಲ್ಲಿ ಬಹಿರಂಗವಾಗಿ ಒಂದು ಹಲಿಗೇಮೇಲೆ ತನ್ನ ಹೆಸರು, ಮಾರುವವನ ಹೆಸರು, ಅಂಗಡಿ ನಂಬರು ಮತ್ತು ಅದರಲ್ಲಿ ಮಾರಲಿಕ್ಕೆ ಲೈಸೆನ್ಸ ಪಡೆದಿರುವ ಪದಾರ್ಥದ ಹೆಸರು ಸಹ ವ್ಯಕ್ತವಾಗಿ ಬರಸಿ ಇಡಬೇಕು.

VI. ಅವನು ಯಾವ ಪದಾರ್ಥಗಳನ್ನಾಗಲಿ ಬದಲಿಯಾಗಿಯಾದರೂ ಯಾ ಅಡಮಾನವಾಗಿಯಾದರೂ ತೆಗದುಕೊಳ್ಳಕೂಡದು, ಮತ್ತು ತಾನು ಮಾರಿದ ಬೀರು ಯಾ ಪೋರ್ಟರಿಗೆ ಇಂಪೀರಿಯಲ್ ಗ್ಯಾಲನ್ ಒಂದಕ್ಕೆ ಒಂದು ರೂಪಾಯಿನ ಲಾಗಾಯತು ಒಂದು ರೂಪಾಯಿ ನಾಲ್ಕಾಣೇ ವರಿವಿಗೂ ಮತ್ತು ಚಿಲ್ಲರೆಯಾಗಿ ಮಾರುವದಕ್ಕೆ ದಾಮಾಷಾಯಿ ಪ್ರಕಾರವೂ ನಗದಾಗಿ ಹಣ ತೆಗೆದುಕೊಳ್ಳಬೇಕು.

VII. ಈ ಲೈಸೆನ್ಸ ಪ್ರಕಾರ ಮಾರುವ ಬೀರು ವ ಪೋರ್ಟರು ಒಂದು ಹಾಗ್ಸ ಹೆಡಿಯಾನೆ ಪೀಪಾಯಿಗೆ ಮಾಲ್ಟ್ ಎಂಬ ಪದಾರ್ಥದ ಆಫವಾ ಅದರಿಂದ ತಯಾರಾದ ಯಾವದಾದರೂ ಪದಾರ್ಥದ ಕೇಕಡಾ 75ರಷ್ಟನ್ನೂ ಮತ್ತು ಕೆಂಟು ದೇಶದಲ್ಲಿ ಬೆಳದಂಥಾ ವಳ್ಳೀದಾಗಿರುವ 3 ಪೌಂಡ್ಸ ಹಾಪ್ಸ ಎಂಬ ಹುವ್ವುಗಳನ್ನೂ ಕೇರಿಸಬೇಕು, ಮತ್ತು ಮೇಲ್ಕಂಡ ಬೀರು ವ ಪೋರ್ಟರು ಭಟ್ಟೀ ಇಸತಕ್ಕವರಿಂದ ಖರೀದಿಗೆ ತಂದ ಹಾಗೆ ನೀರು ಬೆರಿಸದೆ ಯಾ ಇತರ ಪದಾರ್ಥ ಮಿಶ್ರಪಡಿಸಿ ಕೆಡಿಸದೆ ಅದೇ ತರಹೇದ್ದಾಗಿ ಮತ್ತು ಮುಂದೆವಾಗಿರಬೇಕು. ಇಂಥಾ ಬೀರು ವ ಪೋರ್ಟರಿನ ಮಾದರಿಗಳು ಯಕ್ಸೈಜ್ ಇಲಾಖೆಯವರಿಂದ ಅಪೇಕ್ಷಿಸಿದಾಗ ತನಖಿ ಮತ್ತು ಆಜವಾಯಿಷಿ ಮಾಡುವ ಬಗ್ಯಾಗಿ ಭಟ್ಟೀ ಕಾರಖಾನೆಯಿಂದ ತೀಸೆಯಲ್ಲಿ ಕಳುಹಿಸಲ್ಪಡತಕ್ಕದ್ದು.

VIII. ಸ್ಥಳಿಕ ಅಧಿಕಾರವುಳ್ಳ ಯಾವ ಮಾಜಿಸ್ಟ್ರೇಟ್ರಾಗಲಿ ಆಫವಾ ಮಾಜಿಸ್ಟ್ರೇಟರ ಹುಕುಮನ್ನು ಪಡೆದ ಯಾವ ಅಧಿಕಾರಿಯಾಗಲಿ ಯಾ ಯಾವ ಆಬ್ಕಾರಿ ಯಾ ಎಕ್ಸೈಜ್ ಆಫಿಸರಾಗಲಿ ಯಾವ ಹೊತ್ತಿನಲ್ಲಾದರೂ ಅಂಗಡಿಯೊಳಗೆ ಪ್ರವೇಶ ಮಾಡಿ ಸದರೀ ಆವರಣವಲ್ಲಿರುವ ಬೀರು ಯಾ ಪೋರ್ಟರನ್ನು ಅಜವಾಯಿಷಿ ಮಾಡಲು ಅವರಿಗೆ ಅವಕಾಶ ಕೊಡಬೇಕು, ಮತ್ತು ಲೈಸೆನ್ಸದಾರನಿಂದಲೂ ವ ಮಾರುವವನಿಂದಲೂ ಇಡಲ್ಪಡಬೇಕಾದ ಅಂಗಡಿ ಲೆಖ್ಖಗಳನ್ನು ತನಿಖೀ ಮಾಡಲಿಕ್ಕೆ ಹಾಜರ್ಮಾಡಬೇಕು. ಅಂಥಾ ಲೆಖ್ಖಗಳು ಸಾಚಾ ಮತ್ತು ಕರಾರುವಾಕಾ ಆಗಿರದೇಕಲ್ಲದೆ ವಿಧಾಯಕವಾಗಿರುವ ನಮೂನೆಗಳಲ್ಲಿ ರೋಜೀನಾ ಬರೆದಿರಬೇಕು. ತಿರಸ್ಕರಿಸಲ್ಪಟ್ಟ ತವಾಂ ಬೀರೂ ನಾಶಪಡಿಸತಕ್ಕದ್ದು.

IX. ಸದರೀ ಅಂಗಡಿಯನ್ನು ರಾತ್ರಿ 9 ಘಂಟೆಗೆ ಮುಚ್ಚಬೇಕು, ಮತ್ತು ಹಬ್ಬ ಮುಂತಾದ ದಿವಸಗಳಲ್ಲಿ ವಿಶೇಷ ಅಪ್ಪಣೆ ಮೇಲೆ ಹೊರ್ತು ಬೆಳಿಗ್ಯೆ 6 ಘಂಟೆಗೆ ಮುಂಚೆತವಾಗಿ ಅಂಗಡಿ ಬಾಗಲು ತೆಗಿಯಕೂಡದು.

X. ಕಮ್ಮಿಸ್ಸರಿಯಾಟ್ ಇಲಾಖೆಗಾಗಿ ತರಲ್ಪಟ್ಟು ಮತ್ತು ಮಿಲಿಟರಿ ಆಫವಾ ಇತರ ಇಲಾಖೆಗಳಿಂದ ತಿರಸ್ಕರಿಸಲ್ಪಟ್ಟ ಬೀರನ್ನು ಯಾವ ಕಾರಣದಿಂದಲೂ ಅಂಗಡಿಯಲ್ಲಿ ಮಾರಲಿಕ್ಕೆ ಕಳುಹಿಸಲ್ಪಡಕೂಡದು.

XI. ಸದರೀ ಅಂಗಡಿಗೆ ಬಂದೇ ಬಾಗಲಿರಬೇಕು, ಮತ್ತು ಸದರೀ ಕಟ್ಟಡದ ಹಿಂಭಾಗದಲ್ಲಾದರೂ ಯಾ ಕೊನೇ ಭಾಗಗಳಲ್ಲಾದರೂ ಬಾಗಿ ಇಡಕೂಡದು. ಮಧ್ಯ ಮಾರುವ ಜಾಗಲಿಯು ಅಂಗಡಿಯೊಳಗೆ ಇರುವ ಜನಗಳು ಅಂಗಡಿ ಮುಂದೆ ಬೀದೀಲಿ ತಿರುಗಾಡುವ ಜನಗಳಿಗೆ ಕಾಣುವ ಹಾಗೆ ಬಾಗಲಿಗೆದುರಾಗಿರತಕ್ಕದ್ದು, ಮತ್ತು ಪಾನೀಕರಿಗೆ ಇದಕ್ಕೆ ಕೇರಿದ ಹಾಗೆ ಎರಡನೇ ಕೊಠಡಿ ತೆರದಿರಕೂಡದು.

XII. ಮೇಲಿನ ಷರತ್ತುಗಳು ಮತ್ತು ನಿಬಂಧನೆಗಳ ಪೈಕಿ ಯಾವದನ್ನಾದರೂ ತಪ್ಪು ನಡದರೆ ಲೈಸೆನ್ಸದಾರನು ಒಬ್ಬ ಮಾಜಿಸ್ಟ್ರೇಟರ ಮುಂದೆ ತಪ್ಪು ಆಪಾದಿಸಲ್ಪಟ್ಟ ಮೇಲೆ 1881ನೇ ಇಸವಿಯ XXIIನೇ ನಂಬರ ಆಕ್ಟ್ನ ಅನುಸರಿಸಿ ಜುರ್ಮಾನೆ ತೆರಲಿಕ್ಕೂ ಆಫವಾ ಸದರೀ ಆಕ್ಟಿನ 13ನೇ ಸೆಕ್ಷನ್ ಅನುಸರಿಸಿ ಲೈಸೆನ್ಸನ್ನ ಕಳದುಕೊಳ್ಳಲಿಕ್ಕೂ, ಯಾ ಇವೆರಡಕ್ಕೂ ಗುರಿಯಾಗತಕ್ಕದ್ದು.

XIII. ಈ ಲೈಸೆನ್ಸ 189 ನೇ ಇಸವಿ ನೇ ತಾರೀಖು ವರಿವಿಗೆ ಜಾರಿಯೀ ಹೊರ್ತು ತದನಂತರವಲ್ಲ, ಆದರೆ ಇದು 1881ನೇ ಇಸವಿಯ XXIIನೇ ನಂಬರ ಆಕ್ಟಿನ 13 ನ 14ನೇ ಸೆಕ್ಷನ್ಗಳನ್ನನುಸರಿಸಿ ಯಾವಾಗಾಲಾದರೂ ವಾಪಸ್ ತರಿಸಿಕೊಳ್ಳಲ್ಪಡಬಹುದು ಆಫವಾ ಬಿಟ್ಟುಬಿಡಲ್ಪಡಬಹುದು.

ಡೆಪ್ಯೂಟಿ ಕಮ್ಮಿಷನರ ವ ಡಿಸ್ಟ್ರಿಕ್ಟ ಮಾಜಿಸ್ಟ್ರೇಟ್,
ಡಿಸ್ಟ್ರಿಕ್ಟ.

ಎದುರು ಬಿಡಂಡಿಕೆ.

ಈ ಕೆಳಗೆ ರುಜೂ ಮಾಡಿರುವ ಮೇಲ್ಕಂಡ ಲೈಸೆನ್ಸದಾರ ವ ಬಿಕರೀದಾರ ಮತ್ತು ಬಳಿಯಿರುವ ಬೀರ್ ಅಂಗಡಿಗೆ ಸಂಬಂಧಪಟ್ಟ ಇತರರಾದ ನಾವುಗಳು ನಮ್ಮಗಳಿಗಾಗಿಯೂ, ನಮ್ಮ ವಾರಸ್ದಾರರುಗಳಿಗೋಸ್ಕರವೂ, ನ್ಯಾಯವಾದ ಪ್ರತಿನಿಧಿಗಳಿಗೋಸ್ಕರವೂ ಮತ್ತು ವರ್ಗಪಡೆದಂಥಾವರಿಗೋಸ್ಕರವೂ ಇದರ ಬೆಕೆಯಿಂದ ಮೇಲ್ಕಂಡ ಲೈಸೆನ್ಸಿನಲ್ಲಿ ಬರೆಯೋಣಾದ, ಛಾಪಿಸೋಣಾದ ವ ಹೇಳೋಣಾದ ಕರಾರುಗಳಿಗೂ, ಷರತ್ತುಗಳಿಗೂ ಪೂರ್ತಿರುತ್ತೇವೆ.

ತಾರೀಖಿನ ದಿನ ಡಿಸ್ಟ್ರಿಕ್ಟ್ ಡೆಪ್ಯೂಟಿ
ಕಮ್ಮಿಷನರವರ ಆಫಿಸಿನಲ್ಲಿ ನಮಗಳ ರೂಬರೂ ರುಜು ವ ಮೊಹರ್‌ನಿಸಿ ಪೊಪ್ಪಿಸಲ್ಪಟ್ಟರುತ್ತೆ.

ಸಾಕ್ಷಿಗಳು.

1.
2.
೩.

ಲೈಸೆನ್ಸ್‌ದಾರ್ ವ ಬಿಕರೀದಾರ್.

ತಾರೀಖು 14ನೇ ಸೆಪ್ಟಂಬರ್ 1896.

ನಂ. 2919.—ರೆ. ಫೈ. 50—96, ಕೊರಟಿಗೆರೆ ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್‌ಗಾರ್ ಬಿ. ವಾಸುದೇವರಾಯರಿಗೆ, 1896ನೇ ಮೇ 23ನೇ ಮಕ್ತುಂ 10263.—ರೆ. 4033ನೇ ನಂಬರ್ ಗವರ್ನ್‌ಮೆಂಟ್ ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟಿದ್ದ ಐದು ದಿನಗಳ ಕ್ಯಾಜುಯಲ್ ರಜಾ ಅವರ ಕೋರಿಕೆಯಂತೆ ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ವ ರೆವಿನ್ಯೂ
ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಟೆರಿ.

ಪಬ್ಲಿಕ್‌ವರ್ಕ್ಸ್.

ಇಸ್ತಿಹಾರ್‌ನಾಮೆ.

ತಾರೀಖು 17ನೇ ಸೆಪ್ಟಂಬರ್ 1896.

ನಂ. 801.—4912, ಕಡೂರ ಡಿವಿಜನಿಗೆ ಕೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟ್ರೆ ಬಿ. ಸುಬ್ಬರಾಯರಿಗೆ, ಅವರು ಹೊರಟ ತಾರೀಖು ಲಾಗಾಯತು ಎರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಜೆ. ಹ್ಯೂಟ್ಲ್,
ಮೈಸೂರ್ ಗವರ್ನ್‌ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಅಸಿಸ್ಟೆಂಟ್ ಸೆಕ್ರಟೆರಿ.